ಸಂಪುಟ 01 | ಸಂಚಿಕೆ 205 ಮಂಗಳವಾರ 29 ಸೆಪ್ಟೆಂಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1) ಅಂತರರಾಷ್ಟ್ರೀಯ ಆಹಾರ ನಷ್ಟ ಮತ್ತು ವ್ಯರ್ಥತೆಯ ಅರಿವು ದಿನ (International Day of Awareness of Food Loss and Waste Reduction)
ಪ್ರತಿವರ್ಷ ಸೆಪ್ಟೆಂಬರ್ 29ರಂದು ಆಚರಿಸಲಾಗುತ್ತದೆ. ಆಹಾರ ನಷ್ಟ ಮತ್ತು ಆಹಾರ ವ್ಯರ್ಥತೆಯನ್ನು ಕಡಿಮೆ ಮಾಡುವ ಬಗ್ಗೆ ಜಾಗೃತಿ ಮೂಡಿಸುವುದು ಇದರ ಉದ್ದೇಶ.

2) World Heart Day ಹೃದಯದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ದಿನ.

ಸುಭಾಷಿತ

ಹತ್ತು ಜನ ಸ್ನೇಹಿತರೊಂದಿಗೆ ಕುಳಿತುಕೊಂಡು ಒಬ್ಬರ ಬಗ್ಗೆ ಕೆಟ್ಟದ್ದನ್ನು ಮಾತನಾಡುವುದಕ್ಕಿಂತ, ಒಂಟಿಯಾಗಿ ಕುಳಿತು ಒಂದು ಪುಸ್ತಕವನ್ನು ಓದುವುದು ಉತ್ತಮವಾದ ಕೆಲಸ.

-ಬಿ.ಆರ್.ಅಂಬೇಡ್ಕರ್

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಸನ್ ರೈಸ್ ಕಾಲೇಜಿನಲ್ಲಿ ಶಹೀದ್ ಭಗತ್ ಸಿಂಗ್ ಜಯಂತಿ ಆಚರಣೆ

"ಭಗತ್ ಸಿಂಗ್‌ರ ದೇಶಪ್ರೇಮ, ತ್ಯಾಗ ಯುವಜನತೆಗೆ ಸದಾ ಸ್ಫೂರ್ತಿ" ಆಶು ಪಾಶಾ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಭಾರತದ ಸ್ವಾತಂತ್ರ್ಯ ಹೋರಾಟದ ಧೀರ ಕ್ರಾಂತಿಕಾರಿ, ಅಪ್ರತಿಮ ದೇಶಭಕ್ತ ಹಾಗೂ ಯುವಜನತೆಯ ಸ್ಫೂರ್ತಿಯ ಚಿಲುಮೆಯಾದ ಶಹೀದ್ ಭಗತ್ ಸಿಂಗ್ ಅವರ ಜಯಂತಿಯನ್ನು ಸಿಂಧನೂರಿನ ಸನ್ ರೈಸ್ ಡಿ-ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜಿನ ವತಿಯಿಂದ ಗೌರವ ಹಾಗೂ ದೇಶಭಕ್ತಿಯೊಂದಿಗೆ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಶಹೀದ್ ಭಗತ್ ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ, ಅವರ ದೇಶಪ್ರೇಮ, ಧೈರ್ಯ, ತ್ಯಾಗ ಹಾಗೂ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ವಹಿಸಿದ ಮಹತ್ವದ ಪಾತ್ರವನ್ನು ಸ್ಮರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು, ಭಗತ್ ಸಿಂಗ್ ಅವರು ಕೇವಲ ಒಬ್ಬ ಕ್ರಾಂತಿಕಾರಿಯಾಗಿರಲಿಲ್ಲ. ಅವರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅಪ್ರತಿಮ ದೇಶಭಕ್ತರಾಗಿದ್ದರು. ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂಕಲ್ಪವನ್ನು ಕೈಗೊಂಡ ಅವರು, ತಮ್ಮ ವೈಯಕ್ತಿಕ ಜೀವನ, ಸುಖ-ಸೌಲಭ್ಯ ಹಾಗೂ ಭವಿಷ್ಯದ ಬಗ್ಗೆ ಚಿಂತಿಸದೆ ರಾಷ್ಟ್ರದ ಹಿತಕ್ಕಾಗಿ ತ್ಯಾಗದ ಹಾದಿ ಹಿಡಿದರು ಎಂದು ಹೇಳಿದರು.

ಭಗತ್ ಸಿಂಗ್ ಅವರ ಜೀವನ ಇಂದಿನ ಯುವಜನತೆಗೆ ಅತ್ಯಂತ ದೊಡ್ಡ ಸಂದೇಶವಾಗಿದೆ. ದೇಶದ ಬಗ್ಗೆ ಪ್ರೀತಿ, ಸಮಾಜದ ಬಗ್ಗೆ ಕಾಳಜಿ, ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಧೈರ್ಯ ಹಾಗೂ ಸತ್ಯ ಮತ್ತು ನ್ಯಾಯಕ್ಕಾಗಿ ಹೋರಾಡುವ ಮನೋಭಾವವನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು. ಭಗತ್ ಸಿಂಗ್ ಅವರ ತ್ಯಾಗವನ್ನು ಕೇವಲ ಜಯಂತಿ ದಿನದಂದು ಸ್ಮರಿಸುವುದಕ್ಕಿಂತ, ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ ಎಂದು ಲಾಜರ್ ಸಿರಿಲ್ ತಿಳಿಸಿದರು.

ಉಪನ್ಯಾಸಕರಾದ ಆಶು ಪಾಶಾ ಅವರು ಮಾತನಾಡಿ, ಭಗತ್ ಸಿಂಗ್ ಅವರು ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅಚ್ಚಳಿಯದ ಹೆಸರಾಗಿದ್ದಾರೆ. ಬಾಲ್ಯದಿಂದಲೇ ದೇಶದ ಸ್ವಾತಂತ್ರ್ಯ ಮತ್ತು ಸಮಾಜದ ಬದಲಾವಣೆಯ ಕುರಿತು ಆಳವಾದ ಚಿಂತನೆ ಹೊಂದಿದ್ದ ಅವರು, ಯುವಕರಲ್ಲಿ ದೇಶಭಕ್ತಿ ಮತ್ತು ಜಾಗೃತಿಯನ್ನು ಮೂಡಿಸುವಲ್ಲಿ



ಮಹತ್ವದ ಪಾತ್ರ ವಹಿಸಿದ್ದರು. ಅವರ ಜೀವನದಲ್ಲಿ ಕಂಡುಬರುವ ಶಿಸ್ತು, ಧೈರ್ಯ, ಆತ್ಮವಿಶ್ವಾಸ ಹಾಗೂ ದೇಶಕ್ಕಾಗಿ ತ್ಯಾಗ ಮಾಡುವ ಮನೋಭಾವ ಇಂದಿನ ಪೀಳಿಗೆಗೆ ಮಾದರಿಯಾಗಿದೆ ಎಂದರು.

ಉಪನ್ಯಾಸಕರಾದ ಡಾ. ರಾಜೇಶ್ ಅವರು ಮಾತನಾಡಿ, ಭಗತ್ ಸಿಂಗ್ ಅವರ ಜೀವನವು ಭಾರತೀಯ ಸ್ವಾತಂತ್ರ್ಯ ಹೋರಾಟದ ಅತ್ಯಂತ ಪ್ರೇರಣಾದಾಯಕ ಅಧ್ಯಾಯಗಳಲ್ಲಿ ಒಂದಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಯೌವನವನ್ನೇ ಅರ್ಪಿಸಿದ ಭಗತ್ ಸಿಂಗ್ ಅವರು, ಅನ್ಯಾಯ ಮತ್ತು ದಬ್ಬಾಳಿಕೆಯ ವಿರುದ್ಧ ಹೋರಾಡುವ ಧೈರ್ಯವನ್ನು ತೋರಿದರು. ಜೈಲಿನಲ್ಲಿದ್ದ ಸಂದರ್ಭದಲ್ಲಿಯೂ ಅವರ ಓದು, ಚಿಂತನೆ ಹಾಗೂ ಬರವಣಿಗೆಯ ಆಸಕ್ತಿ ಕಡಿಮೆಯಾಗಿರಲಿಲ್ಲ. ಸಮಾಜ, ರಾಜಕೀಯ, ಸ್ವಾತಂತ್ರ್ಯ ಮತ್ತು ಮಾನವೀಯ ಮೌಲ್ಯಗಳ ಕುರಿತು ಅವರು ಆಳವಾಗಿ ಚಿಂತಿಸುತ್ತಿದ್ದರು ಎಂದು ಹೇಳಿದರು.

ಭಗತ್ ಸಿಂಗ್ ಅವರ ಜೀವನದಲ್ಲಿ ದೇಶಪ್ರೇಮ, ತ್ಯಾಗ, ಧೈರ್ಯ, ವಿಚಾರಶೀಲತೆ, ಸಾಮಾಜಿಕ ಜವಾಬ್ದಾರಿ ಹಾಗೂ ಯುವಶಕ್ತಿಯ ಮೇಲಿನ ನಂಬಿಕೆ ಪ್ರಮುಖ ಮೌಲ್ಯಗಳಾಗಿದ್ದವು. ಸ್ವಾತಂತ್ರ್ಯವೆಂದರೆ ಕೇವಲ ವಿದೇಶಿ ಆಡಳಿತದಿಂದ ಮುಕ್ತಿ ಪಡೆಯುವುದಷ್ಟೇ ಅಲ್ಲ; ಸಮಾಜದಲ್ಲಿ ಸಮಾನತೆ, ನ್ಯಾಯ, ಮಾನವೀಯತೆ ಮತ್ತು ಗೌರವವನ್ನು ಸ್ಥಾಪಿಸುವುದೂ ಅಗತ್ಯ ಎಂಬ ಚಿಂತನೆ ಅವರ ಬರಹಗಳಲ್ಲಿ ಮತ್ತು ವಿಚಾರಗಳಲ್ಲಿ ಕಾಣಸಿಗುತ್ತದೆ ಎಂದು ಅವರು ವಿವರಿಸಿದರು.

ಭಗತ್ ಸಿಂಗ್ ?ಯುವಜನತೆಗೆ ಶಾಶ್ವತ ಸ್ಫೂರ್ತಿ ಶಹೀದ್ ಭಗತ್ ಸಿಂಗ್ ಅವರು 1907ರ ಸೆಪ್ಟೆಂಬರ್ 28ರಂದು ಪಂಜಾಬಿನ ಬಂಗಾ ಪ್ರದೇಶದಲ್ಲಿ ಜನಿಸಿದರು. ಬಾಲ್ಯದಿಂದಲೇ ದೇಶಭಕ್ತಿಯ ವಾತಾವರಣದಲ್ಲಿ ಬೆಳೆದ ಅವರು, ಭಾರತದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನು ಅರ್ಪಿಸುವ ಸಂಕಲ್ಪ ಹೊಂದಿದ್ದರು. ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ಸೇರಿದಂತೆ ಬ್ರಿಟಿಷರ ದಮನಕಾರಿ ಆಡಳಿತದ ಘಟನೆಗಳು ಅವರ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರಿದವು.

ಮುಂದಿನ ದಿನಗಳಲ್ಲಿ ಅವರು ಕ್ರಾಂತಿಕಾರಿ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡರು. ಹಿಂದೂಸ್ತಾನ್ ಸೋಷಲಿಸ್ಟ್ ರಿಪಬ್ಲಿಕನ್ ಅಸೋಸಿಯೇಷನ್ (ಊಖಖಂ) ಸೇರಿದಂತೆ ಕ್ರಾಂತಿಕಾರಿ ಸಂಘಟನೆಗಳೊಂದಿಗೆ ಕೆಲಸ ಮಾಡಿದರು. ಲಾಲಾ ಲಜಪತ್ ರೈ ಅವರ ಸಾವಿನ ನಂತರ ನಡೆದ ಘಟನೆಗಳು ಹಾಗೂ ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. 1929ರಲ್ಲಿ ದೆಹಲಿಯ ಕೇಂದ್ರ ಶಾಸನಸಭೆಯಲ್ಲಿ ನಡೆದ ಬಾಂಬ್ ಪ್ರಕರಣದ ನಂತರ ಭಗತ್ ಸಿಂಗ್ ಮತ್ತು ಬಟುಕೇಶ್ವರ ದತ್ತ್ ಬಂಧಿತರಾದರು. ಈ ಘಟನೆಯ ಉದ್ದೇಶದ ಕುರಿತು ಇತಿಹಾಸದಲ್ಲಿ ವಿವಿಧ ಚರ್ಚೆಗಳಿದ್ದರೂ, ನ್ಯಾಯಾಲಯ ಹಾಗೂ ಜೈಲು ವಿಚಾರಣೆಗಳನ್ನು ಬ್ರಿಟಿಷರ ಆಡಳಿತದ ವಿರುದ್ಧ ತಮ್ಮ ವಿಚಾರಗಳನ್ನು ಜನರಿಗೆ ತಲುಪಿಸುವ ವೇದಿಕೆಯಾಗಿ ಬಳಸಿಕೊಂಡದ್ದು ಭಗತ್ ಸಿಂಗ್ ಅವರ ರಾಜಕೀಯ ಚಿಂತನೆಯ ಪ್ರಮುಖ ಭಾಗವಾಗಿತ್ತು.

ಜೈಲಿನಲ್ಲಿದ್ದಾಗ ರಾಜಕೀಯ ಕೈದಿಗಳ ಹಕ್ಕುಗಳಿಗಾಗಿ ಅವರು ಉಪವಾಸ ಸತ್ಯಾಗ್ರಹ ನಡೆಸಿದರು. ಅವರ ಓದು ಮತ್ತು ವಿಚಾರಶೀಲತೆ ಅವರನ್ನು ಕೇವಲ ಕ್ರಾಂತಿಕಾರಿಯನ್ನಾಗಿ ಮಾತ್ರವಲ್ಲದೆ ಆಳವಾಗಿ ಚಿಂತಿಸುವ ಯುವ ನಾಯಕನನ್ನಾಗಿ ರೂಪಿಸಿತು. 1931ರ ಮಾರ್ಚ್ 23ರಂದು ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ಅವರನ್ನು ಬ್ರಿಟಿಷ್ ಸರ್ಕಾರ ಗಲ್ಲಿಗೇರಿಸಿತು. ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಈ ಮೂವರು ಕ್ರಾಂತಿಕಾರಿಗಳು ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ.

ಭಗತ್ ಸಿಂಗ್ ಅವರ ಜೀವನ ನಮಗೆ ಒಂದು ಮಹತ್ವದ ಸಂದೇಶವನ್ನು ನೀಡುತ್ತದೆ?ದೇಶದ ಭವಿಷ್ಯ ಯುವಜನರ ಕೈಯಲ್ಲಿದೆ. ಶಿಕ್ಷಣದೊಂದಿಗೆ ದೇಶದ ಇತಿಹಾಸ, ಸಂವಿಧಾನ, ಸಾಮಾಜಿಕ ಜವಾಬ್ದಾರಿ ಮತ್ತು ಮಾನವೀಯ ಮೌಲ್ಯಗಳ ಅರಿವು ಹೊಂದುವುದು ಇಂದಿನ ಯುವಜನತೆಯ ಕರ್ತವ್ಯವಾಗಿದೆ. ಸಮಾಜದಲ್ಲಿ ಜಾತಿ, ಧರ್ಮ, ಭಾಷೆ ಸೇರಿದಂತೆ ಯಾವುದೇ ಭೇದಭಾವವಿಲ್ಲದೆ ಎಲ್ಲರೂ ಸಹೋದರತ್ವ ಮತ್ತು ಸಮಾನತೆಯೊಂದಿಗೆ ಬದುಕಬೇಕು ಎಂಬ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಸನ್ ರೈಸ್ ಸಂಸ್ಥೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಭಗತ್ ಸಿಂಗ್ ಅವರ ಜೀವನ ಮತ್ತು ಹೋರಾಟದ ಕುರಿತು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ವಿದ್ಯಾರ್ಥಿಗಳಿಗೆ ಭಗತ್ ಸಿಂಗ್ ಅವರ ಜೀವನ ಚರಿತ್ರೆ, ದೇಶಭಕ್ತಿ, ತ್ಯಾಗ ಹಾಗೂ ವಿಚಾರಧಾರೆ ಕುರಿತು ಅರಿವು ಮೂಡಿಸುವ ಮೂಲಕ, ದೇಶದ ಬಗ್ಗೆ ಜವಾಬ್ದಾರಿ ಮತ್ತು ಉತ್ತಮ ನಾಗರಿಕತ್ವದ ಮನೋಭಾವ ಬೆಳೆಸಿಕೊಳ್ಳುವಂತೆ ಕರೆ ನೀಡಲಾಯಿತು.

ಭಗತ್ ಸಿಂಗ್ ಅವರ ದೇಹವನ್ನು ಬ್ರಿಟಿಷರು ನಾಶಪಡಿಸಿದರೂ, ಅವರ ದೇಶಪ್ರೇಮ, ಧೈರ್ಯ, ತ್ಯಾಗ ಮತ್ತು ವಿಚಾರಗಳು ಇಂದಿಗೂ ಕೋಟ್ಯಂತರ ಭಾರತೀಯರ ಮನಸ್ಸಿನಲ್ಲಿ ಜೀವಂತವಾಗಿವೆ. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಶಹೀದ್ ಭಗತ್ ಸಿಂಗ್ ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ.

ಸತೀಶ್ ಜಾರಕಿಹೊಳಿ ವಿರುದ್ಧ ಇಡಿ ದಾಳಿ ಖಂಡಿಸಿ ಕಾಂಗ್ರೆಸ್ ಬೃಹತ್ ಪ್ರತಿಭಟನೆ

❑ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಸಚಿವ ಸತೀಶ ಜಾರಕಿಹೊಳಿ ಅವರ ನಿವಾಸ ಹಾಗೂ ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ನಡೆಸಿದ ದಾಳಿ ಖಂಡಿಸಿ ಕಾಂಗ್ರೆಸ್ ಪಕ್ಷದ ವತಿಯಿಂದ ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಪಟ್ಟಣದ ದೊಡ್ಡ ಹನುಮಂತ ದೇವಸ್ಥಾನದಿಂದ ಪ್ರಾರಂಭವಾದ ಪ್ರತಿಭಟನಾ ರ್ಯಾಲಿಯು ಗಡಿಯಾರ ವೃತ್ತ ಸೇರಿ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಅಂಬೇಡ್ಕರ್ ವೃತ್ತಕ್ಕೆ ಬಂದ ಬೃಹತ್ ಬಹಿರಂಗ ಸಭೆ ನಡೆಯಿತ್ತು ಕೇಂದ್ರ ಸರ್ಕಾರ ಹಾಗೂ ಜಾರಿ ನಿರ್ದೇಶನಾಲಯದ ವಿರುದ್ಧ ಘೋಷಣೆಗಳನ್ನು ಕೂಗಿದರು. ರಾಜಕೀಯ ಉದ್ದೇಶದಿಂದ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಎಂ ಎಲ್ ಸಿ ಬಯ್ಯಾಪುರ ವಿರೋಧ ಪಕ್ಷಗಳ ಮುಖಂಡರನ್ನು ಗುರಿಯಾಗಿಸಿಕೊಂಡು ಕೇಂದ್ರ ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುವ ಮೂಲಕ ರಾಜಕೀಯ ಒತ್ತಡ ಹೇರುವ ಪ್ರಯತ್ನ ನಡೆಯುತ್ತಿದೆ ಎಂದು ದೂರಿದರು.

ಸತೀಶ ಜಾರಕಿಹೊಳಿ ಅವರ ಮೇಲಿನ ಇಡಿ ದಾಳಿ ರಾಜಕೀಯ ಪ್ರೇರಿತವಾಗಿದ್ದರೆ ಅದನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಎಂ ಎಲ್ ಸಿ ಶರಣುಗೌಡ ಬಯ್ಯಾಪುರ, ಪಾಮಯ್ಯ ಮುರಾರಿ , ಅಮರಗುಂಡಪ್ಪ ಮೇಟಿ , ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವಿಂದನಾಯಕ , ಸೇರಿದಂತೆ ಪಕ್ಷದ ಮುಖಂಡರು, ವಿವಿಧ ಘಟಕಗಳ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ಮೈಸೂರು ದಸರಾ ಉದ್ಘಾಟನೆಗೆ ಗವಿಸಿದ್ದೇಶ್ವರ ಶ್ರೀಗಳಿಗೆ ಅಧಿಕೃತ ಆಹ್ವಾನ

❑ ನೈಜ್ಯ ದೆಸೆ ನ್ಯೂಸ್

ಕೊಪ್ಪಳ: ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟಕರಾಗಿ ಆಯ್ಕೆಯಾಗಿರುವ ಕೊಪ್ಪಳದ ಶ್ರೀ ಗವಿಮಠದ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮೀಜಿಯವರಿಗೆ ಇಂದು ಅಧಿಕೃತವಾಗಿ ಆಹ್ವಾನ ನೀಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ಎಸ್. ತಂಗಡಗಿ ಅವರು ಫಲಪುಷ್ಪ ನೀಡಿ ಶ್ರೀಗಳನ್ನು ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ಆಹ್ವಾನಿಸಿದರು.

ನಾಡಹಬ್ಬ ಮೈಸೂರು ದಸರಾ ಮಹೋತ್ಸವಕ್ಕೆ ಈ ಬಾರಿ ಕೊಪ್ಪಳದ ಗವಿಮಠದ ಶ್ರೀಗಳು ಚಾಲನೆ ನೀಡಲಿರುವುದು ಜಿಲ್ಲೆಯ ಭಕ್ತರು ಹಾಗೂ ಸಾರ್ವಜನಿಕರಲ್ಲಿ ಸಂತಸ ತಂದಿದೆ. ಈ ಮೂಲಕ ಕೊಪ್ಪಳದ ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಕ್ಕೆ ರಾಜ್ಯಮಟ್ಟದಲ್ಲಿ ಮತ್ತೊಂದು ಗೌರವ ದೊರೆತಂತಾಗಿದೆ. ಮೈಸೂರು ದಸರಾ ಉದ್ಘಾಟಕರಾಗಿ ಗವಿಸಿದ್ದೇಶ್ವರ ಶ್ರೀಗಳನ್ನು ಆಯ್ಕೆ ಮಾಡಿರುವುದಾಗಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವಿಧಾನಮಂಡಲದ ಸದನದಲ್ಲಿ ಘೋಷಿಸಿದ್ದರು.

ಈ ಘೋಷಣೆಯ ಬೆನ್ನಲ್ಲೇ ಶ್ರೀಗಳ ದಸರಾ ಉದ್ಘಾಟನೆಯ ಕುರಿತು ರಾಜ್ಯಾದ್ಯಂತ ಚರ್ಚೆ ನಡೆದಿತ್ತು. ಇದೀಗ ಅಧಿಕೃತ ಆಹ್ವಾನ ನೀಡಿರುವುದರಿಂದ ದಸರಾ ಕಾರ್ಯಕ್ರಮದಲ್ಲಿ ಶ್ರೀಗಳ ಭಾಗವಹಿಸುವಿಕೆಗೆ



ಸಂಬಂಧಿಸಿದ ಪ್ರಕ್ರಿಯೆ ಮತ್ತೊಂದು ಹಂತ ತಲುಪಿದೆ. ಗವಿಮಠವು ಧಾರ್ಮಿಕ ಚಟುವಟಿಕೆಗಳ ಜೊತೆಗೆ ಶಿಕ್ಷಣ, ಆರೋಗ್ಯ, ದಾಸೋಹ ಸೇರಿದಂತೆ ವಿವಿಧ ಸಾಮಾಜಿಕ ಸೇವಾ ಕಾರ್ಯಗಳ ಮೂಲಕ ಗುರುತಿಸಿಕೊಂಡಿದೆ. ಮೈಸೂರು ದಸರಾ ಮಹೋತ್ಸವದ ಉದ್ಘಾಟನೆಗೆ ಶ್ರೀಗಳಿಗೆ ದೊರೆತಿರುವ ಆಹ್ವಾನವು ಕೊಪ್ಪಳ ಜಿಲ್ಲೆಯ ಜನರಲ್ಲಿ ವಿಶೇಷ ಆಸಕ್ತಿ ಮೂಡಿಸಿದ್ದು, ಶ್ರೀಗಳು ದಸರಾ ವೇದಿಕೆಯಲ್ಲಿ ನೀಡಲಿರುವ ಸಂದೇಶದ ಕುರಿತು ಭಕ್ತರು ಕಾತರದಿಂದ ಕಾಯುತ್ತಿದ್ದಾರೆ.

ಈ ಸಂದರ್ಭದಲ್ಲಿ ಸಂಸದ ರಾಜಶೇಖರ್ ಹಿಟ್ನಾಳ್, ಶಾಸಕ ಕೆ. ರಾಘವೇಂದ್ರ ಹಿಟ್ನಾಳ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ್ ನಾಗಪ್ಪ, ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ, ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರಸನ್ನ ಗಡಾದ್, ಗ್ಯಾರಂಟಿ ಯೋಜನೆ ಅಧ್ಯಕ್ಷ ಶ್ರೀನಿವಾಸ ರೆಡ್ಡಿ ಉಪಸ್ಥಿತರಿದ್ದರು.

ಹಿರಿಯರ ಆರೋಗ್ಯದ ಜತೆಗೆ ಮಾನಸಿಕ ನೆಮ್ಮದಿಗೂ ಆದ್ಯತೆ ನೀಡಿ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ ತಾಲೂಕಿನ ದೋಟಿಹಾಳದಲ್ಲಿ ಹಿರಿಯ ನಾಗರಿಕರ ಮಾಹಿತಿ, ಆರೋಗ್ಯ ಮತ್ತು ಮಹತ್ವ ಕುರಿತು ಕಾರ್ಯಾಗಾರ ಹಿರಿಯ ನಾಗರಿಕರು ಕುಟುಂಬದ ಬೇರುಗಳಿದ್ದಂತೆ. ಅವರ ಅನುಭವ, ಜ್ಞಾನ ಹಾಗೂ ಸಂಸ್ಕಾರ ಮುಂದಿನ ಪೀಳಿಗೆಗೆ ದಾರಿದೀಪವಾಗಿದ್ದು, ಹಿರಿಯರ ಆರೋಗ್ಯದ ಜತೆಗೆ ಅವರ ಮಾನಸಿಕ ನೆಮ್ಮದಿಗೂ ಕುಟುಂಬ ಹಾಗೂ ಸಮಾಜ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಡಾ. ಗುರುದತ್ತ ಕೆ. ಕುಷ್ಟಗಿ ಹೇಳಿದರು.

ದೋಟಿಹಾಳ್ ಗ್ರಾಮದ ಗ್ರಂಥಾಲಯದಲ್ಲಿ ಹಿರಿಯ ನಾಗರಿಕರಿಗಾಗಿ 'ಆರೋಗ್ಯ ನಮ್ಮ ಕೈಯಲ್ಲಿದೆ' ಎಂಬ ವಿಷಯದ ಕುರಿತು ಆಯೋಜಿಸಿದ್ದ ವಿಶೇಷ ಕಾರ್ಯಾಗಾರದಲ್ಲಿ ಅವರು ವಿಶೇಷ ಉಪನ್ಯಾಸ ನೀಡಿದರು. ಹಿರಿಯರು ಕೇವಲ ವಯಸ್ಸಿನಲ್ಲಿ ಹಿರಿಯರಲ್ಲ; ಅವರು ಅನುಭವದಲ್ಲಿ ಶ್ರೀಮಂತರು, ಜ್ಞಾನದಲ್ಲಿ ಆಳವಾದವರು ಹಾಗೂ ಮೌಲ್ಯಗಳಲ್ಲಿ ದೃಢರಾಗಿದ್ದಾರೆ. ಜೀವನದ ಏರುಪೇರುಗಳನ್ನು ಎದುರಿಸಿ ಗಳಿಸಿದ ಅನುಭವ ಮತ್ತು ಸಂಸ್ಕಾರವನ್ನು ಮುಂದಿನ ಪೀಳಿಗೆಗೆ ನೀಡುವವರು ಹಿರಿಯರು. ಅವರ ಮಾತುಗಳಲ್ಲಿ ಜೀವನದ ಪಾಠವಿದ್ದು, ಅವರ ನೆನಪುಗಳಲ್ಲಿ ನಮ್ಮ ಇತಿಹಾಸ ಅಡಗಿದೆ. ಆದ್ದರಿಂದ ಹಿರಿಯರನ್ನು ಗೌರವಿಸುವುದು ನಮ್ಮ ಕರ್ತವ್ಯದ ಜತೆಗೆ ಮಾನವೀಯ ಹೊಣೆಗಾರಿಕೆಯಾಗಿದೆ ಎಂದರು. ಹಿರಿಯರ ಆರೋಗ್ಯಕ್ಕಾಗಿ ನಿಯಮಿತ ಆರೋಗ್ಯ ತಪಾಸಣೆ, ಪೌಷ್ಟಿಕ ಆಹಾರ, ವೈದ್ಯರ ಸಲಹೆಯಂತೆ ಔಷಧ ಸೇವನೆ, ಸಾಧ್ಯವಾದಷ್ಟು ದೈಹಿಕ ಚಟುವಟಿಕೆ, ಸಮರ್ಪಕ ವಿಶ್ರಾಂತಿ ಹಾಗೂ ಮನಸ್ಸಿಗೆ ನೆಮ್ಮದಿ ಅಗತ್ಯ. ಯಾವುದೇ ಆರೋಗ್ಯ ಸಮಸ್ಯೆಯನ್ನು ನಿರ್ಲಕ್ಷಿಸದೆ ಸಮಯಕ್ಕೆ ಸರಿಯಾಗಿ ವೈದ್ಯರನ್ನು ಸಂಪರ್ಕಿಸಬೇಕು. ದೈಹಿಕ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಮುಖ್ಯವಾಗಿದ್ದು, ಹಿರಿಯರೊಂದಿಗೆ ಮಾತನಾಡುವುದು, ಅವರ ಮಾತುಗಳನ್ನು ಆಲಿಸುವುದು ಮತ್ತು ಅವರಿಗೆ ಸಮಯ ನೀಡುವುದು ಕೂಡ ಆರೋಗ್ಯ ಕಾಪಾಡುವ ಪ್ರಮುಖ ಭಾಗವಾಗಿದೆ ಎಂದು ತಿಳಿಸಿದರು.



ಹಿರಿಯರಿಗೆ ಸರ್ಕಾರದಿಂದ ದೊರೆಯುವ ಪಿಂಚಣಿ, ಆರೋಗ್ಯ ಸೇವೆಗಳು, ರಿಯಾಯಿತಿಗಳು ಹಾಗೂ ವಿವಿಧ ಕಲ್ಯಾಣ ಯೋಜನೆಗಳ ಕುರಿತು ಸರಿಯಾದ ಮಾಹಿತಿ ತಲುಪಿಸುವುದು ಅಗತ್ಯ. ಮಾಹಿತಿ ಇದ್ದಾಗ ಮಾತ್ರ ತಮ್ಮ ಹಕ್ಕು ಹಾಗೂ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯ. ಇಂತಹ ಕಾರ್ಯಾಗಾರಗಳು ಹಿರಿಯರಲ್ಲಿ ಆತ್ಮವಿಶ್ವಾಸ ಹಾಗೂ ಸುರಕ್ಷಿತ ಭಾವನೆ ಮೂಡಿಸಲು ಸಹಕಾರಿಯಾಗುತ್ತವೆ ಎಂದರು. ಗ್ರಂಥಾಲಯ ಮೇಲ್ವಿಚಾರಕ ಶ್ರೀಕಾಂತ ಕಿರಗಿ ಮಾತನಾಡಿ, ಈ ಕಾರ್ಯಕ್ರಮದ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯ ನಾಗರಿಕರು ಗ್ರಂಥಾಲಯಕ್ಕೆ ಆಗಮಿಸಿ ತಮ್ಮ ಜೀವನಾನುಭವಗಳನ್ನು ಹಂಚಿಕೊಳ್ಳಬೇಕು. ಹಿರಿಯರ ಅನುಭವಗಳು ನಮಗೆ ಮಾರ್ಗದರ್ಶನ ನೀಡುತ್ತವೆ. ಕುಟುಂಬದ ಹಿರಿಯರನ್ನು ನಿರ್ಲಕ್ಷಿಸದೆ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ, ಅವರ ಮಾತುಗಳನ್ನು ಗೌರವದಿಂದ ಆಲಿಸಿ, ಅವರಿಗೆ ಸಮಯ ನೀಡುವ ಸಂಕಲ್ಪ ಮಾಡಬೇಕು ಎಂದರು.

ಸಾನಿಧ್ಯ ವಹಿಸಿದ್ದ ಶ್ರೀ ರುದ್ರಮುನಿ ಸ್ವಾಮೀಜಿ ಮಾತನಾಡಿ, "ಹಿರಿಯರನ್ನು ಗೌರವಿಸುವ ಸಮಾಜವೇ ಮಾನವೀಯತೆಯ ನಿಜವಾದ ಪ್ರತೀಕ. ಹಿರಿಯರು ಸಂತೋಷವಾಗಿದ್ದರೆ ಕುಟುಂಬದಲ್ಲಿ ನೆಮ್ಮದಿ, ಅವರು ಆರೋಗ್ಯವಾಗಿದ್ದರೆ ಕುಟುಂಬ ಬಲವಾಗಿರುತ್ತದೆ. ಅವರು ಗೌರವದಿಂದ ಬದುಕಿದಾಗ ಸಮಾಜದ ಮೌಲ್ಯಗಳು ಮತ್ತಷ್ಟು ಎತ್ತರಕ್ಕೇರುತ್ತವೆ," ಎಂದರು. ಹಿರಿಯ ನಾಗರಿಕರ ಆರೋಗ್ಯ, ಸುರಕ್ಷತೆ, ಹಕ್ಕುಗಳು ಹಾಗೂ ಸಂತೋಷಕ್ಕೆ ಕಾರ್ಯಾಗಾರವು ಹೊಸ ದಾರಿಯನ್ನು ತೋರಿಸಲಿ ಎಂದು ಆಶಿಸಿದರು. ಕಾರ್ಯಕ್ರಮದ ನಂತರ ವಿಶೇಷ ಉಪನ್ಯಾಸಕ ಡಾ. ಗುರುದತ್ತ ಕೆ. ಅವರನ್ನು ಶ್ರೀ ರುದ್ರಮುನಿ ಸ್ವಾಮೀಜಿ, ಗ್ರಂಥಾಲಯ ಮೇಲ್ವಿಚಾರಕರು ಹಾಗೂ ಹಿರಿಯ ನಾಗರಿಕರು ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಶ್ರೀನಿವಾಸ್, ಈಶಪ್ಪ ಹುಬ್ಬಳ್ಳಿ, ಹರೀಶ್ ಚಿಟ್ಟಿ, ನಾರಾಯಣಪ್ಪ ಬಾದ, ಪುಂಡಲೀಕಪ್ಪ ಕಿರಗಿ, ಶಶಿಧರ್, ವೆಂಕಟೇಶ್ ಆರ್., ತಿಪ್ಪಣ್ಣ ಲಾಳಿ, ಅಮರೇಶ್, ನಾಮದೇವ, ನಹೀಮ್ ಖಾನ್, ಮಾನಪ್ಪ ನಿಡಶೇಸಿ, ದೀಪಾ ರಾಯಚೂರು ಸೇರಿದಂತೆ ಗ್ರಾಮಸ್ಥರು ಹಾಗೂ ಹಿರಿಯ ನಾಗರಿಕರು ಉಪಸ್ಥಿತರಿದ್ದರು. ಶ್ರೀನಿವಾಸ್ ಕಂಟ್ಲಿ ನಿರೂಪಿಸಿದರು. ಶ್ರೀದೇವಿ ರಾಯಚೂರು ವಂದನಾರ್ಪಣೆ ಮಾಡಿದರು.

ಸಾಹಿತ್ಯ ಸಿಂಚನ

ಹಸಿರಿನ ಎಲೆಗಳಲ್ಲಿ ಗಾಳಿಯು ಹಾಡುತಿದೆ,
ಹೂವಿನ ಪರಿಮಳದಲ್ಲಿ ಪ್ರೀತಿಯು ತುಂಬಿದೆ.
ನದಿಯ ಅಲೆಗಳು ಮಧುರ ರಾಗ ನುಡಿಸುತಿವೆ,
ಹಕ್ಕಿಗಳ ಕಲರವ ಹೊಸ ಗೀತೆ ಹಾಡುತಿವೆ.

ಬೆಟ್ಟದ ಮಡಿಲಲ್ಲಿ ಮೋಡಗಳು ತೇಲುತ್ತಿವೆ,
ಮಳೆಯ ಹನಿಗಳು ಮುತ್ತಾಗಿ ಭೂಮಿಗೆ ಬೀಳುತ್ತಿವೆ.
ಸೂರ್ಯನ ಕಿರಣಗಳು ಬೆಳಕನ್ನು ಚೆಲ್ಲುತ್ತಿವೆ,
ಚಂದ್ರನ ಕಿರಣಗಳು ಕನಸುಗಳ ಹೊತ್ತು ತರುತ್ತಿವೆ.

ತಂಗಾಳಿಯ ಸ್ಪರ್ಶದಲ್ಲಿ ಮಧುರ ಭಾವವಿದೆ,
ಮಣ್ಣಿನ ಸುವಾಸನೆಯಲ್ಲಿ ಹೃದಯದ ಪ್ರೀತಿಯಿದೆ.
ಚಿಟ್ಟೆಗಳ ರೆಕ್ಕೆಗಳಲ್ಲಿ ಬಣ್ಣದ ಕನಸಿದೆ,
ಮರಗಳ ನೆರಳಿನಲ್ಲಿ ನೆಮ್ಮದಿಯ ಉಸಿರಿದೆ.

ಕೋಗಿಲೆಯ ಕೂಗಿನಲ್ಲಿ ಪ್ರೇಮದ ಸ್ವರವಿದೆ,
ಹೂವಿನ ನಗುವಿನಲ್ಲಿ ಬದುಕಿನ ಸೊಬಗಿದೆ.
ಆಕಾಶದ ನೀಲಿಯಲ್ಲಿ ಅನಂತ ಆಸೆಯಿದೆ,
ಸಮುದ್ರದ ಅಲೆಗಳಲ್ಲಿ ಆಳವಾದ ಪ್ರೀತಿಯಿದೆ.

ಪ್ರಕೃತಿಯ ಮಡಿಲೇ ಪ್ರೀತಿಯ ಸುಂದರ ತಾಣ,
ಅದರ ಪ್ರತಿಯೊಂದು ಕ್ಷಣವೂ ಮಧುರ ಗಾನ.
ಪ್ರಕೃತಿಯ ಪ್ರೇಮಗೀತೆ ಮನದಲ್ಲಿ ಮೊಳಗಲಿ,
ಜೀವನದ ಪಯಣವೆಲ್ಲ ಹಸಿರಾಗಿ ಅರಳಲಿ.

ನ್ಯಾಷನಲ್ ಬಿಲ್ಡರ್ಸ್ ಅವಾರ್ಡ್ ಗೆ ಶಿಕ್ಷಕಿ ರೇಣುಕಾ ಆಯ್ಕೆ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರ: ಈಚನಾಳ 2026 – 27 ನೇ ಸಾಲಿನ ರೋಟರಿ ಕ್ಲಬ್ ರಾಯಚೂರು ಇವರು ನ್ಯಾಷನಲ್ ಬಿಲ್ಡರ್ಸ್ ಅವಾರ್ಡ್ ಗೆ ಶಿಕ್ಷಕಿ ಶ್ರೀಮತಿ ರೇಣುಕಾ ಜಿ.ಎಂ. ಎಚ್.ಪಿ.ಎಸ್ ಈಚನಾಳ ತಾಲೂಕ ಲಿಂಗಸಗೂರ ಇವರಿಗೆ ಆಯ್ಕೆ ಮಾಡಿ ಸನ್ಮಾನಿಸಿ ಗೌರವಿಸಲಾಯಿತು



ಈ ಪ್ರಶಸ್ತಿಯನ್ನು ಅವರು ಮಾಡಿರುವ ಶೈಕ್ಷಣಿಕ ಸೇವೆ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ನಿರಂತರವಾಗಿ ಮಾಡುತ್ತಿರುವ ಪ್ರಯತ್ನ ಮಕ್ಕಳ ದಾಖಲಾತಿ ಆಂದೋಲನ ಪ್ರತಿಭಾ ಕಾರಂಜಿ ಕಲಿಕೆ ಹಬ್ಬ ಕ್ರೀಡಾ ಚಟುವಟಿ–ಕೆಗಳು ಹಾಗೂ ವಿವಿಧ ಶೈಕ್ಷಣಿಕ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದರಿಂದ ಕಲಿಕಾ ಮಟ್ಟ ಹೆಚ್ಚಿನ ರೀತಿಯಲ್ಲಿ ಇದರ ಪಾತ್ರವನ್ನು ಗಮನಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ ಈ ಸಂದರ್ಭದಲ್ಲಿ ಶಿಕ್ಷಕರು ಕ್ಲಸ್ಟರ್ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು

ವಿವಿಧ ಜಯಂತಿಗಳು ಹಾಗೂ ಕನ್ನಡ ರಾಜ್ಯೋತ್ಸವ ಕುರಿತು ಶಾಸಕ ದರ್ಶನ್ ಧ್ರುವನಾರಾಯಣ್ ಸಮ್ಮುಖದಲ್ಲಿ ಪೂರ್ವಭಾವಿ ಸಭೆ

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ದಕ್ಷಿಣ ಕಾಶಿ ನಂಜನಗೂಡು ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಮಹಾತ್ಮ ಗಾಂಧೀಜಿ ಜಯಂತಿ, ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ, ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಗಳ ಆಚರಣೆ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ರವರು ಪಾಲ್ಗೊಂಡು, ಕಾರ್ಯಕ್ರಮಗಳ ಸಿದ್ಧತೆ, ಆಚರಣೆಯ ಕುರಿತು ಅಧಿಕಾರಿಗಳಿಂದ ಮುಖಂಡರಿಂದ ಸಲಹೆ ಸೂಚನೆಗಳನ್ನು ಪಡೆದು,



ಚರ್ಚಿಸಿ ಅಗತ್ಯ ಕ್ರಮಗಳ ಕುರಿತು ಸೂಕ್ತ ನಿರ್ಧಾರಗಳನ್ನು ಕ್ರಮ ಕೈಗೊಂಡು ಈ ಎಲ್ಲಾ ಕಾರ್ಯಕ್ರಮಗಳು ಬಹಳ ಅಚ್ಚುಕಟ್ಟಾಗಿ ವಿಜೃಂಭಣೆಯಿಂದ ನಡೆಯಬೇಕು ಎಂದು ಸೂಚನೆ ನೀಡಿದರು ಈ ಸಭೆಯಲ್ಲಿ ತಹಸೀಲ್ದಾರ್ ಸ್ಮಿತಾ ರಾಮು ರವರು, ನಗರ ಬ್ಲಾಕ್ ಅಧ್ಯಕ್ಷರಾದ ಸಿ. ಎಂ ಶಂಕರ್ ರವರು ಶ್ರೀಕಂಠೇಶ್ವರ ದೇವಾಲಯದ ವ್ಯವಸ್ಥಾಪನ ಸಮಿತಿಯ, ಅಧ್ಯಕ್ಷರಾದ ಚಿನ್ನದ ಗುಡಿ ಹುಂಡಿ ಬಸವೇಗೌಡರು, ಇಟಿ ಜೆರಾಲ್ಡ್ ರಾಜೇಶ್ ಮುಖಂಡರಾದ ಹೆಡತಲೆ ನಾಗರಾಜ್ ರವರು, ಗಾಯತ್ರಿ ಮೋಹನ್ ರವರು, ಶ್ರೀಧರ್ ರವರು ಸೇರಿದಂತೆ ಹಲವು ಮುಖಂಡರು ವಿವಿಧ ಸಂಘಟನೆಗಳ ಅಧ್ಯಕ್ಷರು ಪದಾಧಿಕಾರಿಗಳು, ಅಧಿಕಾರಿಗಳು ಹಾಜರಿದ್ದರು.

ಕಾರುಣ್ಯಾಶ್ರಮದಲ್ಲಿ ಕಾರಟಗಿಯ ಶಿವರಡ್ಡಿ ನಾಯಕ ವಕೀಲರ ಅರ್ಥಪೂರ್ಣ ಜನ್ಮ ಸಾರ್ಥಕ ದಿನ ಆಚರಣೆ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಕಾರಟಗಿ ಹಾಗೂ ಕನಕಗಿರಿ ತಾಲೂಕ ವಾಲ್ಮೀಕಿ ಸಮಾಜ ಹಾಗೂ ಶಿವರೆಡ್ಡಿ ನಾಯಕ ವಕೀಲರು ಅಭಿಮಾನಿ ಬಳಗ ಕಾರಟಗಿ ತಾಲೂಕಿನ ಸರ್ವ ಸಮಾಜದ ಗುರು ಹಿರಿಯರುಗಳ ಸಹಯೋಗದೊಂದಿಗೆ ಕಾರಟಗಿ ಮಾಜಿ ಎ.ಪಿ.ಎಂ.ಸಿ. ಅಧ್ಯಕ್ಷರಾದ ಹಾಗೂ ವಾಲ್ಮೀಕಿ ಸಮಾಜದ ಹಿರಿಯ ಮುಖಂಡರಾದ ಶಿವರಡ್ಡಿ ನಾಯಕ ವಕೀಲರ 56ನೇ ವರ್ಷದ ಜನ್ಮ ಸಾಥ–'ಕ ದಿನವನ್ನು ಸಿಂಧನೂರು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ)ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ,

ಮಮತೆಯ ಮಡಿಲು" ಎನ್ನುವ ವಿಶೇಷ ಕಾರ್ಯಕ್ರಮದಡಿಯಲ್ಲಿ ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚ–'ರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶಿವರಡ್ಡಿ ನಾಯಕ ವಕೀಲರು ಆಶ್ರಯದಾತರುಗಳಿಗೆ ವಿವಿಧ ಬಗೆಯ ಮಹಾಪ್ರಸಾದ ಸೇವೆ ಹಾಗೂ ಹಣ್ಣು ಹಂಪಲುಗಳನ್ನು ವಿತರಿಸಿದರು. ಈ ಸಮಾರಂಭದಲ್ಲಿ ಕಾರುಣ್ಯ ಆಶ್ರಮದ ವತಿಯಿಂದ ಹಾಗೂ ಸಿಂಧನೂರು ಕಾರಟಗಿ ಕನಕಗಿರಿ ಗಂಗಾವತಿ ತಾಲೂಕಿನ ಸರ್ವ ಸಮಾಜದ ಗುರು ಹಿರಿಯರುಗಳು ಶಿವರಡ್ಡಿ ನಾಯಕ ವಕೀಲರು ಇವರನ್ನು ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಕೊಪ್ಪಳ ಜಿಲ್ಲಾ ವಾಲ್ಮೀಕಿ ಸಮಾಜದ ಅಧ್ಯಕ್ಷರಾದ ಕೆ. ಎನ್. ಪಾಟೀಲ್ ಮಾತನಾಡಿ ಕಾರಟಿ–ಗಿಯ ದಿ. ಭಗವಂತಪ್ಪ ನಾಯಕರ ಆದ–



'ರ್ಶವೇ ನಮ್ಮೆಲ್ಲರಿಗೆ ಸ್ಫೂರ್ತಿ. ಹೆತ್ತವರ ಆದ–'ರ್ಶ ದೊಂದಿಗೆ ಸರ್ವಧರ್ಮಿಣೀಯರ ಪ್ರೀತಿ ವಿಶ್ವಾಸ ಗಳಿಸಿರುವ ನಮ್ಮ ಶಿವರಡ್ಡಿ ನಾಯಕ ವಕೀಲರು ಅವರ ತಂದೆಯವರ ಆದ–'ರ್ಶ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡು ಸರ್ವ ಸಮಾಜದ ಪ್ರೀತಿಗೆ ಪಾತ್ರರಾಗಿದ್ದಾರೆ.

ಮತ್ತು ವಿಶೇಷವಾಗಿ ಅವರ ಇಂದಿನ ಈ ಜನ್ಮದಿನ ಸಮಾರಂಭ ಕಾರ್ಯಕ್ರಮ ಕರುಣೆ ಮಮತೆ ಪ್ರೀತಿ ವಿಶ್ವಾಸ ತುಂಬಿರುವಂತಹ ಈ ಕರುಣೆಯ ಕಾರುಣ್ಯ ಕುಟುಂಬದಲ್ಲಿ ನೆರವೇರುತ್ತಿರುವುದು ಇವರ ಜನ್ಮ ಸಾಥ–'ಕ ದಿನವಾಗಿದೆ. ಸಮಾಜದಿಂದ ಹಾಗೂ ಕುಟುಂಬದಿಂದ ತಿರಸ್ಕೃತಗೊಂಡವರನ್ನು ಸ್ವಂತ ತಂದೆ ತಾಯಿಗಳಂತೆ ಅಪ್ಪಿಕೊಳ್ಳುವ ನಮ್ಮ ಶಿವ ರಡ್ಡಿ ನಾಯಕರ ಕೊಡುಗೆ ಸಮಾಜಕ್ಕೆ ಅಪಾರವಾಗಿದೆ. ಇಂದು ಈ ಕಾರುಣ್ಯ ಆಶ್ರಮವನ್ನು ನಾನು ನೋಡಿದಾಗ ಕೇವಲ ಕಡುಬಡತನದ ಜಂಗಮನಾದ ಅಮರಯ್ಯ ಸ್ವಾಮಿ ಹಾಗೂ ಅವರ ಪುತ್ರರಾದ ಚನ್ನಬಸಯ್ಯಸ್ವಾಮಿಗಳು ಸಮಾಜದ ಕರುಣೆಯ ಕಾರುಣ್ಯ ಮೂರ್ತಿಗಳಾಗಿದ್ದಾರೆ.

' ಮತ್ತು ಈ ಆಶ್ರಮದಲ್ಲಿನ ಸಂದೇಶಗಳು ನಮ್ಮ ಸಂಸ್ಕಾರ ಸಂಸ್ಕೃತಿಯನ್ನು ಉಳಿಸುವಂತಹ ಉಪದೇಶಗಳಾಗಿವೆ. ಈ ಆಶ್ರಮದಲ್ಲಿರುವ ಎಲ್ಲಾ ದೇವರ ಸ್ವರೂಪಿಗಳಿಗೆ ಮತ್ತು ನಮ್ಮ ಶಿವರೆಡ್ಡಿ ನಾಯಕ ವಕೀಲರು ಮತ್ತು ಅವರೆಲ್ಲಾ ಅಪಾರ ಕುಟುಂಬ ವರ್ಗಕ್ಕೆ ಸರ್ವ ದೇವರುಗಳ ಆಶೀರ್ವಾದವಿರಲಿ ಎನ್ನುವ ವಿಶೇಷ ಪ್ರಾರ್ಥನೆಯೊಂದಿಗೆ ನಾನು ಶಿವರೆಡ್ಡಿ ನಾಯಕ ವಕೀಲರಿಗೆ ನಮ್ಮ ಸಮಾಜದ ಪರವಾಗಿ ಶುಭ ಕೋರುತ್ತಿದ್ದೇನೆ ಎಂದು ಮಾತನಾಡಿ ಶಿವ ರೆಡ್ಡಿ ನಾಯಕ ಅವರಿಗೆ ಶುಭ ಹಾರೈಸಿದರು.

ನಂತರ ಶಿವರೆಡ್ಡಿ ನಾಯಕ ವಕೀಲರು ಮಾತನಾಡಿ ನಿಮ್ಮೆಲ್ಲರ ಪ್ರೀತಿ ವಿಶ್ವಾಸಕ್ಕೆ ಹಾಗೂ ನಮ್ಮ ಕುಟುಂಬ ಚಿರಋಣಿಯಾಗಿರುತ್ತದೆ. ನನ್ನ ಈ ಜನ್ಮದಿನವನ್ನು ಹಲವಾರು ಸಾಮಾಜಿಕ ಕಾರ್ಯಗಳೊಂದಿಗೆ ಎಲ್ಲಾ ಸಮಾಜದ ಗುರುಹಿ–ರಿಯರುಗಳು ಮತ್ತು ಯುವಕರು ನೆರವೇ–ರಿಸುತ್ತಿರುವುದು ಇಂದು ನನ್ನ ಬದುಕಿನ ಸಾಥ–'ಕ ದಿನವಾಗಿದೆ. ಮತ್ತು ವಿಶೇಷವಾಗಿ ಕಾರುಣ್ಯ ಎನ್ನುವ ಕರುಣೆಯ ಕುಟುಂಬದಲ್ಲಿರುವ ನಿಜ ಸ್ವರೂಪಿ ಶರಣರ ಆಶೀರ್ವಾದ ಮತ್ತು ಇಬ್ಬರು ಶರಣರ ಆಶೀರ್ವಾದದೊಂದಿಗೆ ಆಚರಣೆ ಮಾಡುತ್ತಿರುವುದು ನನ್ನ ಜೀವನದ ಇತಿಹಾಸದ ಕಾರ್ಯಕ್ರಮವಾಗಿದೆ. ಇಂದು ನನ್ನನ್ನು ಹರಸಿ ಹಾರೈಸಿ ಆಶೀರ್ವದಿಸಿರುವ ಪ್ರತಿಯೊಬ್ಬರಿಗೂ ಕೂಡ ನನ್ನ ಅಂತರಾಳದಿಂದ ಅನಂತ ಕೋಟಿ ಕೋಟಿ ಪ್ರಣಾಮಗಳು ಎಂದು ಮಾತನಾಡಿದರು.

ಈ ಕಾರ್ಯಕ್ರಮದಲ್ಲಿ ಪೂಜ್ಯಶ್ರೀ ಶಿವಾನಂದ ಶರ್ಮಾಜಿ ಪೀಠಾಧಿಪತಿಗಳು ಶ್ರೀ ಗುರುಕುಲ ಆಶ್ರಮ ಸಿಂಧಿಗೇರಿ ತಾ. ಕುರುಗೋಡು ಹಾಗೂ ವೇದಮೂರ್ತಿ ಶ್ರೀ ವೀರೇಶ ಯಡಿಯೂರು ಮಠ ಶ್ರೀ ಶಾಂಭವಿ ಪುಣ್ಯಾಶ್ರಮ ಸಿಂಧನೂರು. ಶ್ರೀ ಡಾ. ಮಲ್ಲಿಕಾರ್ಜುನ ಸ್ವಾಮಿ ಹಿರೇಮಠ ಕರಡಕಲ್ ಇವರುಗಳು ದಿವ್ಯ ಸಾನಿಧ್ಯ ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಗದ್ದೆಪ್ಪ ನಾಯಕ ಧರ್ಮದರ್ಶಿಗಳು ವಾಲ್ಮೀಕಿ ಸಮಾಜ ಕಾರಟಗಿ. ವೀರೇಶ ತಳವಾರ ಗ್ರಾ. ಪಂ. ಅಧ್ಯಕ್ಷರು ಮೈಲಾಪುರ.

ಅಯ್ಯಪ್ಪ ಉಪ್ಪಾರ. ರವಿನಂದನ್ ಗ್ರಾ.ಪಂ. ಅಧ್ಯಕ್ಷರು ಮರ್ಲಾನಹಳ್ಳಿ. ಸೋಮನಾಥ ಹೆಬ್ಬಡದ ವಕೀಲರು. ಕನಕರಾಯ ಉಳೇನೂರು ದುರುಗೇಶ ಪ್ಯಾಟಿಹಾಳ. ಮಹೇಶ ಕಂದಗಲ್. ಬಸವರಾಜ. ಎಂ. ತಳವಾರ. ಸುರೇಶ ಬೆಳ್ಳಿಕಟ್ಟೆ. ಗ್ರಾ. ಪಂ. ಅಧ್ಯಕ್ಷರು ಬೂದಗುಂಪ. ಯಮನೂರಪ್ಪ ನಾಯಕ ಸೋಮನಾಳ. ಶರಣಪ್ಪ ಆಕಳಕುಂಪಿ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸಯ್ಯಸ್ವಾಮಿ ಹಿರೇಮಠ ಸದಸ್ಯರಾದ ಸುಜಾತ ಹಿರೇಮಠ. ಸಲಹಾ ಸಮಿತಿಯ ಸದಸ್ಯರುಗಳಾದ ಶರಣಪ್ಪ ನಾಯಕ ಕಸಬಾ ಲಿಂಗಸೂಗೂರ. ವೀರೇಶ. ಟಿ. ಸಿ. ಸ್ಟುಡಿಯೋ ಲಿಂಗಸೂಗೂರ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ.

ಮಹಾಂತೇಶ ದೋಟಿಹಾಳ.ಶರಣು ಸ್ವಾಮಿ. ಬಸವ ಸ್ವಾಮಿ. ಹಾಗೂ ಕಾರಟಗಿ ಮತ್ತು ಕನಕಗಿರಿ ತಾಲೂಕಿನ ವಾಲ್ಮೀಕಿ ಸಮಾಜದ ಮತ್ತು ಸರ್ವ ಸಮಾಜದ ಹಲವಾರು ಗುರುಹಿರಿಯರುಗಳು ಉಪಸ್ಥಿತರಿದ್ದರು.

ವಿಶ್ವ ರೇಬಿಸ್ ದಿನಾಚರಣೆ

ನಾಯಿ ಕಡಿತ ನಿರ್ಲಕ್ಷ್ಯ ವಹಿಸದಿರಿ ಕೂಡಲೇ ರೇಬಿಸ್ ಚಿಕಿತ್ಸೆ ಪಡೆದುಕೊಳ್ಳಿ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರು, ಪ್ರಾಥಮಿಕ ಆರೋಗ್ಯ ಕೇಂದ್ರ ಜವಳಗೇರಾ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಿಂಧನೂರು ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ರೇಬಿಸ್ ದಿನಾಚರಣೆ ಅಂಗವಾಗಿ ತಾಲೂಕಿನ ವಾಲ್ಮೀಕಿ ನಗರದ ಅಂಗನವಾಡಿ ಕೇಂದ್ರದಲ್ಲಿ ಜನಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ಅವರು, ರೇಬಿಸ್ ರೋಗವು ಮುಖ್ಯವಾಗಿ ನಾಯಿ ಸೇರಿದಂತೆ ಸೋಂಕಿತ ಪ್ರಾಣಿಗಳ ಕಡಿತದಿಂದ ಉಂಟಾಗುವ ಮರಣಾಂತಿಕ ಕಾಯಿಲೆಯಾಗಿದ್ದು, ಇದನ್ನು ಶೇ.100 ರಷ್ಟು ತಡೆಗಟ್ಟಬಹುದು ಎಂದು



ತಿಳಿಸಿದರು. ಸಾಕು ನಾಯಿ, ಬೀದಿ ನಾಯಿ ಅಥವಾ ನಾಯಿ ಮರಿಗಳು ಸೇರಿದಂತೆ ಯಾವುದೇ ನಾಯಿ ಕಚ್ಚಿದರೂ ರೇಬಿಸ್ ಸೋಂಕು ಹರಡುವ ಸಾಧ್ಯತೆ ಇರುವುದರಿಂದ ನಿರ್ಲಕ್ಷ್ಯ ವಹಿಸಬಾರದು ಎಂದರು.

ನಾಯಿ ಕಚ್ಚಿದ ತಕ್ಷಣ ಗಾಯವಾದ ಸ್ಥಳವನ್ನು ಸೋಪು ಮತ್ತು ಹರಿಯುವ ನೀರಿನಿಂದ ಕನಿಷ್ಠ 15 ನಿಮಿಷಗಳ ಕಾಲ ಚೆನ್ನಾಗಿ ತೊಳೆಯಬೇಕು. ನಂತರ ನಂಜುನಿರೋಧಕ ಔಷಧಿಯನ್ನು ಹಚ್ಚಿ, ಕೂಡಲೇ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ತೆರಳಿ ರೇಬಿಸ್ ಲಸಿಕೆ ಹಾಗೂ ಅಗತ್ಯ ಚಿಕಿತ್ಸೆ ಪಡೆಯಬೇಕು ಎಂದು ಸಲಹೆ ನೀಡಿದರು.

ನಂತರ ಮಾತನಾಡಿದ ಆರೋಗ್ಯ ನಿರೀಕ್ಷಣಾಧಿಕಾರಿ ಅಂಬಮ್ಮ ಅವರು, ಬೀದಿ ನಾಯಿಗಳ ಬಗ್ಗೆ ಮಕ್ಕಳಿಗೆ ಹಾಗೂ ತಾಯಂದಿ–ರಿಗೆ ಅರಿವು ಮೂಡಿಸುವುದು ಅಗತ್ಯವಾಗಿದೆ.

ನಾಯಿ ಕಚ್ಚಿದ ಸಂದರ್ಭದಲ್ಲಿ ಮನೆಮದ್ದು ಅಥವಾ ಮೂಢನಂಬಿಕೆಗಳನ್ನು ಅನುಸ–ರಿಸದೆ, ತಕ್ಷಣವೇ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರಾದ ಜಯಮ್ಮ, ದುರ್ಗಮ್ಮ, ಆಶಾ ಕಾರ್ಯಕರ್ತೆಯರಾದ ದುರ್ಗಮ್ಮ, ಮಲ್ಲಮ್ಮ ಹಾಗೂ ತಾಯಂದಿರು ಭಾಗವಹಿಸಿದ್ದರು. ರೇಬಿಸ್ ತಡೆಗಟ್ಟುವ ಕುರಿತು ಮಾಹಿತಿ ನೀಡುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಜಾಲಹಳ್ಳಿಯ ಭಗತ್ ಸಿಂಗ್ ಕಾಲೋನಿಯಲ್ಲಿ ಅದ್ದೂರಿಯಾಗಿ ಭಗತ್ ಸಿಂಗ್ ಜಯಂತಿ ಆಚರಣೆ

ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದ ಭಗತ್ ಸಿಂಗ್ ಕಾಲೋನಿಯ ಭಗತ್ ಸಿಂಗ್ ವೃತ್ತದಲ್ಲಿ ಭಗತ್ ಸಿಂಗ್ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ರೈತ ಸಂಘದ ಮುಖಂಡರಾದ ನರಸಣ್ಣ ನಾಯಕ ಹಾಗೂ ಗುರುಗೌಡ ಮಾಲಿಪಾಟೀಲ್ ಅವರು ಭಗತ್ ಸಿಂಗ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ತಾಲೂಕು ಸಿಪಿಐ(ಎಂ) ಕಾರ್ಯದರ್ಶಿ ನರಸಣ್ಣ ನಾಯಕ ಮಾತನಾಡಿ, "ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಹಾಗೂ ಕ್ರಾಂತಿಕಾರಿ ಯುವ ನಾಯಕರಾಗಿದ್ದ ಭಗತ್ ಸಿಂಗ್ ಅವರು ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ,



ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಚೈತನ್ಯ ತುಂಬಿದರು. ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ಶಹೀದ್ ಭಗತ್ ಸಿಂಗ್ ಅವರ ಜನ್ಮದಿನವನ್ನು ಜಾಲಹಳ್ಳಿಯ ಭಗತ್ ಸಿಂಗ್ ಕಾಲೋನಿಯಲ್ಲಿ ಆಚ–ರಿಸುತ್ತಿರುವುದು ಹೆಮ್ಮೆಯ ಸಂಗತಿ" ಎಂದರು.

ಭಗತ್ ಸಿಂಗ್ ಅವರ ಹೋರಾಟದ ಸ್ಫೂರ್ತಿ ಇಂದಿಗೂ ಯುವಜನತೆ, ಶೋಷಿತರು, ರೈತರು, ಕಾರ್ಮಿಕರು ಹಾಗೂ ದುಡಿಯುವ ಜನರ ಹಕ್ಕುಗಳ ಹೋರಾಟಕ್ಕೆ ದಾರಿದೀಪವಾಗಿದೆ. ಅವರ ಬದುಕು, ಹೋರಾಟ ಮತ್ತು ತ್ಯಾಗ?ಬಲಿದಾನಗಳು ಎಂದೆಂದಿಗೂ ಸ್ಮರಣೀಯ ಹಾಗೂ ಆದ–'ರ್ಶಪ್ರಾಯವಾಗಿವೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಷರೀಫ್ ಕುರುಕುಂದಿ ಅವರು ಭಗತ್ ಸಿಂಗ್ ಅವರ ಹೋರಾಟ ಮತ್ತು ತ್ಯಾಗವನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾದ ಮಕ್ತುಮ್ ಪರಾಶಿ, ಕುಮಾರ್ ಚಪ್ಪಳಕಿ, ಶಿವಮಾನ್ಯ ತ್ಯಾಪ್ಲಿ, ಊರಿನ ಮುಖಂಡರಾದ ಗುರುಗೌಡ ಮಾಲಿಪಾಟೀಲ್, ಶಿವಪ್ಪ ಗಣೇಕಲ್, ಶಿವರಾಜ್ ಗಾಂಜಿ, ಮೌನೇಶ್ ದಾಸರ, ಹನುಮಂತ ಮಡಿವಾಳ, ನರಸಣ್ಣ ತ್ಯಾಪ್ಲಿ, ರಂಗನಾಥ್ ತ್ಯಾಪ್ಲಿ, ಮಹೇಬೂಬ್ ಕುರುಕುಂದಿ, ಮೌನೇಶ್ ಚಪ್ಪಳಕಿ, ಬಾಲಯ್ಯ ಗೋಸಾಲ್ ಸೇರಿದಂತೆ ಭಗತ್ ಸಿಂಗ್ ಅಭಿಮಾನಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. "ಭಗತ್ ಸಿಂಗ್ ಅಮರ್ ರಹೇ" ಎಂಬ ಘೋಷಣೆಗಳು ಮೊಳಗಿದವು.

ಸಿಂಧನೂರಿನ ನೋಬರ್ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಂದ ಕಾರುಣ್ಯ ಆಶ್ರಮದಲ್ಲಿ ಸೇವಾ ಕಾರ್ಯಗಾರ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ನೊಬೆಲ್ ಮಹಾವಿದ್ಯಾಲಯದ ಬಿ.ಎ. ಸಮಾಜ ಶಾಸ್ತ್ರ ವಿಭಾಗದ ವಿದ್ಯಾರ್ಥಿಗಳಿಂದ ನಗರದ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಅವರೊಂದಿಗೆ ಹಲವಾರು ವಿಷಯಗಳೊಂದಿಗೆ ಸಂವಾದ ಮಾಡುವ ಮೂಲಕ ವಿದ್ಯಾರ್ಥಿಗಳಿಂದ ಒಂದು ದಿನದ ಸೇವಾ ಕಾರ್ಯಗಾರ ಜರುಗಿತು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಸಹಕಾರ ಇಲಾಖೆಯ ಡಾ. ಮಲ್ಲಿಕಾರ್ಜುನ ಕಮತಗಿ ಹಾಗೂ ಪ್ರಾಧ್ಯಾಪಕರಾದ ಕು. ವಿಜಯಲಕ್ಷ್ಮಿ ಇವರುಗಳಿಗೆ ಆಶ್ರಮದ ವತಿಯಿಂದ ಗೌರವಿಸಲಾಯಿತು. ಈ ಸಮಯದಲ್ಲಿ ವಿದ್ಯಾರ್ಥಿಗಳ ಆಶ್ರಮದ ಆಶ್ರಯದಾತರುಗಳ ಜೊತೆ ಆಪ್ತ ಸಮಾಲೋಚನೆ ನಡೆಸಿ ಆಶ್ರಮದ ಸೇವಾ ಕಾರ್ಯಗಳ ಬಗ್ಗೆ ಅರಿತುಕೊಂಡರು. ಈ



ಸೇವಾ ಕಾರ್ಯಗಾರದಲ್ಲಿ ನೊಬೆಲ್ ಕಾಲೇಜಿನ ಸಹಕಾರ ಇಲಾಖೆಯ ಡಾ. ಮಲ್ಲಿಕಾರ್ಜುನ ಕಮತಗಿ ಮಾತನಾಡಿ ನಾಲ್ಕು ಗೋಡೆಗಳ ಮಧ್ಯೆ ಪಡೆಯುವ ಶಿಕ್ಷಣಕ್ಕಿಂತ ಕಾರುಣ್ಯಾಶ್ರಮದ ವಾಸ್ತವ ಸೇವೆಯೇ ನಿಜವಾದ ಶಿಕ್ಷಣ ಮತ್ತು ವಿಶೇಷವಾಗಿ ನಮ್ಮ ಎಲ್ಲಾ ವಿದ್ಯಾರ್ಥಿಗಳು ತಾವುಗಳು ಮಾತನಾಡಿದ ಭಾವುಕ ನುಡಿಗಳು ತಮ್ಮ ಹೆತ್ತವರನ್ನು ಮತ್ತು ಸಮಾಜದಲ್ಲಿರುವ ಎಲ್ಲಾ ಗುರು ಹಿರಿಯರನ್ನು ಪ್ರೀತಿಸಿ ಪೂಜಿಸಿ ಗೌರವಿಸಿದಾಗ ಮಾತ್ರ ನಿಮ್ಮ ಶಿಕ್ಷಣಕ್ಕೆ ಅರ್ಥ ಬರುತ್ತದೆ.

ಆಶ್ರಮದ ಸಂಸ್ಥಾಪಕರಾದ ಅಮರಯ್ಯ ಸ್ವಾಮಿ ಮತ್ತು ಸೇವಾರ್ತರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಇವರುಗಳು ಪ್ರತಿಯೊಬ್ಬ ದಾನಿಗಳಲ್ಲಿಯೂ ಕೂಡ ಮತ್ತು ಸಾರ್ವಜನಿಕರಲ್ಲಿ ಯಾರೂ ಕೂಡ ನಿಮ್ಮ ಹೆತ್ತವರನ್ನು ಕಾರುಣ್ಯದಂತಹ ಕರ್ಮ ಭೂಮಿಗೆ ತಳ್ಳಬೇಡಿ ಇದು ಸುಮಾರು ವರ್ಷಗಳ ಹಿಂದೆ ನಿಜವಾದ ಅನಾಥರಿಗಾಗಿ ನೊಂದವರಿಗಾಗಿ ಹುಟ್ಟಿರುವ ಒಂದು ಕುಟುಂಬವಾಗಿದೆ. ಎನ್ನುವ ಹಲವಾರು ಸಂದೇಶಗಳು ಕೂಡ ಬಹಳ ಮಹತ್ವ ಪಡೆದಿವೆ. ಇಂದಿನ ಈ ಸೇವಾ ಕಾರ್ಯಗಾರ ಮಹತ್ವವನ್ನು ತಾವು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು.

ಭಾರತ ದೇಶದ ಸುಂದರ ಪ್ರಜೆಗಳಾಗಿ ಎನ್ನುವ ಆಶಯ ನಮ್ಮ ನೋಬೆಲ್ ಸಂಸ್ಥೆಯದ್ದು ಎಂದು ಮಾತನಾಡಿದರು. ನಂತರ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ನಮ್ಮ ಸೇವೆಗೆ ನಮ್ಮನ್ನು ಟೀಕಿಸುವವರು ಹಿಯಾಳಿಸುವವರು ನಮ್ಮ ಬಗ್ಗೆ ಅಪಪ್ರಚಾರ ಅವಮಾನಿಸುವವರೇ ನಮ್ಮ ಈ ಸೇವೆಗೆ ಸ್ಫೂರ್ತಿಯಾಗಿದ್ದಾರೆ. ಇವರುಗಳ ಮಾತುಗಳನ್ನು ಲೆಕ್ಕಿಸದೆ ಸಹಾಯ ಸಹಕಾರ ಮಾಡುವ ದಾನಿಗಳು ಈ ಕಾರುಣ್ಯ ಕುಟುಂಬದ ಕರುಣೆಯ ಮೂರ್ತಿಗಳಾಗಿದ್ದಾರೆ. ತಮ್ಮ ಶಿಕ್ಷಣ ಬರೀ ತಮ್ಮ ಜೀವನ ರೂಪಿಸಿಕೊಳ್ಳಲು ಆಗಬಾರದು ಸಮಾಜ–ಕ್ಕೆ ನಿಮ್ಮದೇ ಆದಂತಹ ಹುಡುಗಿ ನೀಡಿದಾಗ ಮಾತ್ರ ನಿಮ್ಮ ಈ ಶಿಕ್ಷಣ ನಿಮ್ಮೆಲ್ಲರ ಸಾರ್ಥಕ ಬದುಕಿಗೆ ಕಾರಣವಾಗುತ್ತೆ ಎಂದು ಮಾತನಾಡಿ ವಿದ್ಯಾರ್ಥಿಗಳು ಕೇಳಿದ ಎಲ್ಲಾ ಪ್ರಶ್ನೆಗೆ ಉತ್ತರಿಸಿದರು.


ನಂತರ ಕಾರ್ಯಕ್ರಮದಲ್ಲಿ ಸುಮಾರು ಹತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮ ಭಾವನೆಗಳನ್ನು ಹಂಚಿಕೊಳ್ಳುವ ಮೂಲಕ ಹಲವಾರು ಸಂದೇಶಗಳನ್ನು ನುಡಿದರು. ಈ ಸೇವಾ ಕಾರ್ಯಗಾರದಲ್ಲಿ ಕು. ವಿಜಯಲಕ್ಷ್ಮಿ ಪ್ರಾಧ್ಯಾಪಕರು ನೊಬೆಲ್ ಕಾಲೇಜ್. ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮ–ರಿಯಪ್ಪ.ಜ್ಯೋತಿ. ಮಹಾಂತೇಶ ದೋಟಿಹಾಳ. ಶರಣು ಸ್ವಾಮಿ. ಬಸವ ಸ್ವಾಮಿ. ವಿದ್ಯಾರ್ಥಿಗಳಾದ ಕಾವ್ಯ. ಮಾರತಮ್ಮ.ಆಲಂ ಬೀ. ಹಾಗೂ ಸುಮಾರು 20ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಆಶ್ರಮದ ವತಿಯಿಂದ ಸೇವಾ ಪ್ರಮಾಣ ಪತ್ರವನ್ನು ವಿತ–ರಿಸಲಾಯಿತು.ನಂತರ ಆಶ್ರಯದಾತರುಗಳಿಗೆ ಹಣ್ಣು ಹಂಪಲುಗಳನ್ನು ವಿತರಿಸಿ ಮಾನವೀಯತೆ ಮೆರೆದರು.

ನೇಮಕಾತಿ ಪ್ರಕಟಣೆ

HLL Lifecare ನೇಮಕಾತಿ 2026 ವಿವಿಧ ಫಾರ್ಮಸಿಸ್ಟ್ ಮತ್ತು ಸಹಾಯಕ ಫಾರ್ಮಸಿಸ್ಟ್ ಹುದ್ದೆಗಳಿಗೆ ನೇರ ಸಂದರ್ಶನ (Walk-in Interview) ಸೆಪ್ಟೆಂಬರ್ 28, 2026

HLL Lifecare ನೇಮಕಾತಿ 2026: ವಿವಿಧ ಫಾರ್ಮಸಿಸ್ಟ್ ಮತ್ತು ಸಹಾಯಕ ಫಾರ್ಮಸಿಸ್ಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. HLL Lifecare Limited ತನ್ನ ಸೆಪ್ಟೆಂಬರ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಫಾರ್ಮಸಿಸ್ಟ್ ಮತ್ತು ಸಹಾಯಕ ಫಾರ್ಮಸಿಸ್ಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ (ಕರ್ನಾಟಕ ಸರ್ಕಾರ) ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 02-ಅಕ್ಟೋಬರ್-2026 ರಂದು ನಡೆಯುವ ನೇರ ಸಂದರ್ಶನದಲ್ಲಿ ಭಾಗವಹಿಸಬಹುದು. ಅಧಿಕೃತ ವೆಬ್‌ಸೈಟ್: lifecarehll.com

ಹಾನಗಲ್ ಶಿವಯೋಗಿ ಜ್ಯೋತಿ



ಹಾನಗಲ ಪುರದಿ ಬೆಳಗಿದ ಜ್ಯೋತಿ, ಕುಮಾರ
ಶಿವಯೋಗಿ ಕರುಣಾಮೂರ್ತಿ ।
ಶಿವಯೋಗ ಮಂದಿರ ಕರಗತ ಮಾಡಿ, ಅಂಧರ ಬಾಳಿಗೆ
ಬೆಳಕನು ನೀಡಿದಿ ॥ ಪಲ್ಲವಿ॥

ಹರಳಳ್ಳಿ ಪುಣ್ಯದ ಗರ್ಭದಿ, ಜನ್ಮವ ತಳೆದ ಮಹಾತ್ಮನು
ನೀನು ।
ಹಾಲಯ್ಯ ವೀರಮ್ಮನ ಒಲವಿನ ಕಂದ, ಜಗದ ಕತ್ತಲೆಯ ನೀಗಿದ ಭಾನು ॥

ಮಲಪ್ರಭ ತೀರದ ಮಂದಿರದಲ್ಲಿ, ಯೋಗದ ದೀಕ್ಷೆಯ ಧಾರೆ ಎರೆದೆ ।
ನೂರಾರು ಮಠಗಳ ಜ್ಞಾನದ ಹಣತೆಯ, ಹಚ್ಚುತ ಧರ್ಮದ ಕ್ರಾಂತಿಯ ತಂದೆ ॥

ಪಂಚಾಕ್ಷರಿ ಗವಾಯಿಗಳ ಪ್ರೇರಿಸಿ, ಸಂಗೀತ ಕಲೆಯ ಸುಧೆಯನು ಹರಿಸಿದೆ ।
ಅಂಧರ ಕಣ್ಣಿಗೆ ಬೆಳಕನು ಕೊಡುತ, ಕರುಣೆಯ ಕಡಲಾಗಿ ಮನವನು ಗೆದ್ದೆ ॥

ವಿರಾಟ್‌ಪುರ ವಿರಾಗಿ ನೀನೆ, ನಮಿಸುವೆವು ನಿನಗೆ ಶಿರಬಾಗಿ ।
ಬೀರಪ್ಪ ಶಂಭೋಜಿಯ ಭಕ್ತಿಯ ನುಡಿಯಲಿ, ನೆಲೆಸು ನೀ ಯೋಗಿ ॥

ಬೀರಪ್ಪ ಶಂಭೋಜಿ, ಸಿಂಧನೂರು

ಮುಷ್ಕರ ವಾಪಸ್ : ಎಂದಿನಂತೆ ಕಾರ್ಯನಿರ್ವಹಿಸಲಿವೆ ಬ್ಯಾಂಕ್‌ಗಳು

❏ ನೈಜ್ಯ ದೆಸೆ ನ್ಯೂಸ್

ನವದೆಹಲಿ: ವಾರದಲ್ಲಿ ಐದು ದಿನಗಳ ಕೆಲಸ ಸೇರಿದಂತೆ ವಿವಿಧ ಬೇಡಿಕೆಗಳ ಕುರಿತು ಇಂಡಿಯನ್ ಬ್ಯಾಂಕ್ಸ್ ಅಸೋಸಿಯೇಷನ್ (ಐಬಿಎ) ನೀಡಿದ ಭರವಸೆಯ ಮೇರೆಗೆ ಬ್ಯಾಂಕ್ ಸಂಘಟನೆಗಳು ತಮ್ಮ ಮೂರು ದಿನಗಳ ರಾಷ್ಟ್ರವ್ಯಾಪಿ ಮುಷ್ಕರವನ್ನು ಹಿಂಪಡೆದಿವೆ. ಹೀಗಾಗಿ, ಇಂದಿನಿಂದ ಬ್ಯಾಂಕಿಂಗ್ ಕಾರ್ಯಾಚರಣೆಗಳು ಎಂದಿನಂತೆ ಮುಂದುವರಿಯಲಿವೆ.



ಸೆ. 28ರಿಂದ 30ರವರೆಗೆ ನಡೆಯಬೇಕಿದ್ದ ಈ ಮುಷ್ಕರಕ್ಕೆ ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಯೂನಿಯನ್ಸ್ ಕರೆ ನೀಡಿತ್ತು. ಎಲ್ಲಾ ಶನಿವಾರಗಳನ್ನೂ ರಜಾದಿನಗಳೆಂದು ಘೋಷಿಸುವುದು ಸೇರಿದಂತೆ ತಮ್ಮ ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಐಬಿಎ ಭರವಸೆ ನೀಡಿದ ಹಿನ್ನೆಲೆಯಲ್ಲಿ ಬ್ಯಾಂಕ್ ಸಂಘಟನೆಗಳು ತಡರಾತ್ರಿ ಮುಷ್ಕರವನ್ನು ಹಿಂಪಡೆದವು. ಉಳಿದ ಶನಿವಾರಗಳನ್ನು ರಜಾದಿನಗಳೆಂದು ಘೋಷಿಸುವ ಕುರಿತು ಚರ್ಚಿಸಲು ಉನ್ನತ ಮಟ್ಟದ ಸಮಿತಿಯನ್ನು ತಕ್ಷಣವೇ ರಚಿಸಲಾಗುವುದು. ಈ ಸಮಿತಿಯು ಎಲ್ಲ ಸಂಭಾವ್ಯ ಪರ್ಯಾಯಗಳನ್ನು ಪರಿಶೀಲಿಸಿ, ಎಲ್ಲ ಪಾಲುದಾರರೊಂದಿಗೆ ಚರ್ಚಿಸಿ, ಮುಖ್ಯವಾಗಿ ಗ್ರಾಹಕರಿಗೆ ಸ್ವೀಕಾರಾರ್ಹವಾದ ಪರಿಹಾರ ರೂಪಿಸಲಿದೆ ಎಂದು ತಡರಾತ್ರಿ ನೀಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ. ಪ್ರಸ್ತುತ ಬ್ಯಾಂಕ್‌ಗಳು ಭಾನುವಾರ ಹಾಗೂ ಪ್ರತಿ ತಿಂಗಳ ಎರಡನೇ ಮತ್ತು ನಾಲ್ಕನೇ ಶನಿವಾರದಂದು ಮುಚ್ಚಿರುತ್ತವೆ.ಎ ಸ್ಕೇಲ್ ಮತ್ತು ಅದಕ್ಕಿಂತ ಮೇಲಿನ ಶ್ರೇಣಿಯ ಅಧಿಕಾರಿಗಳಿಗೆ ಅನ್ವಯಿಸುವ ಪಿಎಲ್‌ಐ ಯೋಜನೆಗೆ ಸಂಬಂಧಿಸಿದಂತೆ ಸಂಘಟನೆಗಳು ಹಾಗೂ ಸಂಘಗಳ ಅಭಿಪ್ರಾಯಗಳನ್ನು ಪರಿಗಣಿಸಿ ಸರ್ಕಾರಕ್ಕೆ ಬದಲಾವಣೆಗಳನ್ನು ಪ್ರಸ್ತಾಪಿಸಲು ಸಂಬಂಧಪಟ್ಟವರೊಂದಿಗೆ ಚರ್ಚೆ ನಡೆಸಲಾಗುವುದು ಎಂದು ತಿಳಿಸಲಾಗಿದೆ.

ಇದೇ ಮೊದಲ ಬಾರಿಗೆ ದಸರಾದಲ್ಲಿ ಕಂಬಳ ಓಟ : ಅ.18-19 ರಂದು ಚಾಲನೆ

❏ ನೈಜ್ಯ ದೆಸೆ ನ್ಯೂಸ್

ಮೈಸೂರು: ವಿಶ್ವವಿಖ್ಯಾತ ನಾಡಹಬ್ಬ ದಸರಾ ಮಹೋತ್ಸವದಲ್ಲಿ ವಿವಾದ ಮತ್ತು ವಿರೋಧದ ನಡುವೆಯೂ ಮೊದಲ ಬಾರಿಗೆ ಆಯೋಜಿಸುತ್ತಿರುವ ಕಂಬಳ ಓಟದ ದಿನಾಂಕವನ್ನು ಅಂತಿಮಗೊಳಿಸಲಾಗಿದೆ. ಅ. 18 ಮತ್ತು 19 ರಂದು ಎರಡು ದಿನಗಳ ಕಾಲ ಕಂಬಳ ಓಟ ನಡೆಯಲಿದೆ. ಅ.15 ರಂದು 5 ಜೋಡಿ ಕೋಣಗಳಿಂದ ಪ್ರಾಯೋಗಿಕ ಓಟ ನಡೆಸಲು ನಿರ್ಧರಿಸಲಾಗಿದೆ.



ಮೈಸೂರಿನ ರಿಂಗ್ ರಸ್ತೆಯ ಸಾತಗಳ್ಳಿ ಬಳಿ 20 ಎಕರೆ ವಿಸ್ತೀರ್ಣದಲ್ಲಿ 147 ಮೀಟರ್ ಉದ್ದದ ಕಂಬಳದ ಟ್ರ್ಯಾಕ್ ನಿರ್ಮಾಣ ಕಾಮಗಾರಿ ಅಂತಿಮ ಹಂತ ತಲುಪಿದ್ದು, ಟ್ರ್ಯಾಕ್‌ಗೆ ವಿಜಯ-ದಶಮಿ ಕರೆ ಎಂದು ನಾಮಕರಣ ಮಾಡಲಾಗಿದೆ. ಈ ಬಾರಿಯ ಕಂಬಳದಲ್ಲಿ ಕರಾವಳಿ ಭಾಗದಿಂದ ಸುಮಾರು 150 ರಿಂದ 160 ಜೋಡಿ ಕೋಣಗಳು ಭಾಗವಹಿಸುವ ನಿರೀಕ್ಷೆಯಿದೆ. ಈ ಸಂಬಂಧ ಮೈಸೂರು ಜಿಲ್ಲಾಡಳಿತದ ನಿಯೋಗವು ಕರಾವಳಿಗೆ ತೆರಳಿ ಕಂಬಳ ಸಮಿತಿ ಪದಾಧಿಕಾರಿಗಳು ಹಾಗೂ ಕೋಣಗಳ ಮಾಲೀಕರೊಂದಿಗೆ ಸಮಾಲೋಚನೆ ನಡೆಸಿ ಅಧಿಕತ ಆಹ್ವಾನ ನೀಡಿದೆ.

ಅರಕೇರಾ ತಾಲೂಕಿನ ಗಾಣಧಾಳ ಗ್ರಾಮವನ್ನು ಹೋಬಳಿ ಕೇಂದ್ರವನ್ನಾಗಿ ಮಾಡಲು ತಹಸೀಲ್ದಾರರಿಗೆ ಮನವಿ

❏ ನೈಜ್ಯ ದೆಸೆ ನ್ಯೂಸ್

ಅರಕೇರಾ: ರಾಯಚೂರು ಜಿಲ್ಲೆಯ ಅರಕೇರಾ ತಾಲೂಕಿನ ಗಾಣಧಾಳ ಗ್ರಾಮ ಪಂಚಾಯಿತಿಯನ್ನು ಅರಕೇರಾ ತಾಲೂಕಿನಲ್ಲಿಯೇ ಮುಂದುವರಿಸುವುದರ ಜೊತೆಗೆ, ಗಾಣಧಾಳ ಗ್ರಾಮವನ್ನು ಹೋಬಳಿ ಕೇಂದ್ರವನ್ನಾಗಿ ಘೋಷಿಸಿ ನಾಡ ಕಚೇರಿ ಸ್ಥಾಪಿಸಬೇಕೆಂದು ಒತ್ತಾಯಿಸಿ ಗಾಣಧಾಳ ಗ್ರಾಮದ ಸಮಸ್ತ ಗ್ರಾಮಸ್ಥರು ಅರಕೇರಾ ತಹಸೀಲ್ದಾರರಿಗೆ ಮನವಿ ಪತ್ರ ಸಲ್ಲಿಸಿದರು.

ಗಾಣಧಾಳ ಗ್ರಾಮವು ಸುತ್ತಮುತ್ತಲಿನ ಹಲವು ಗ್ರಾಮಗಳಿಗೆ ಭೌಗೋಳಿಕವಾಗಿ ಸೂಕ್ತ ಕೇಂದ್ರ ಸ್ಥಳದಲ್ಲಿದ್ದು, ಈಗಾಗಲೇ ಗ್ರಾಮ ಪಂಚಾಯಿತಿ ಕಚೇರಿ, ಸಂತೆ ಮಾರುಕಟ್ಟೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಚೆ ಕಚೇರಿ, ಬ್ಯಾಂಕ್, ಪಶು ಆಸ್ಪತ್ರೆ, ಪ್ರೌಢಶಾಲೆ, ಗ್ರಂಥಾಲಯ ಹಾಗೂ ಇ-ಬಿ ಸ್ಟೇಷನ್ ಸೇರಿದಂತೆ ಹಲವು ಪ್ರಮುಖ ಸೌಲಭ್ಯಗಳನ್ನು ಹೊಂದಿದೆ. ಹೀಗಾಗಿ ಗಾಣಧಾಳವನ್ನು ಹೋಬಳಿ ಕೇಂದ್ರವನ್ನಾಗಿ ಮಾಡಿದರೆ ಸುತ್ತಮುತ್ತಲಿನ ಗ್ರಾಮಗಳ ಜನರಿಗೆ ಆಡಳಿತಾತ್ಮಕ ಸೇವೆಗಳು ಮತ್ತಷ್ಟು ಸುಲಭವಾಗಿ ದೊರೆಯಲಿವೆ ಎಂದು ಗ್ರಾಮಸ್ಥರು ಮನವಿಯಲ್ಲಿ ತಿಳಿಸಿದ್ದಾರೆ.



ಗಾಣಧಾಳ ಗ್ರಾಮದಿಂದ ಅರಕೇರಾ ತಾಲೂಕು ಕೇಂದ್ರವು ಸುಮಾರು 21 ಕಿಲೋಮೀಟರ್ ದೂರದಲ್ಲಿದೆ. ಜಾತಿ, ಆದಾಯ, ವಾಸಸ್ಥಳ ಸೇರಿದಂತೆ ವಿವಿಧ ಪ್ರಮಾಣಪತ್ರಗಳನ್ನು ಪಡೆಯಲು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಅರಕೇರಾಗೆ ತೆರಳಬೇಕಾಗಿದೆ. ರೈತರು ಕೃಷಿ ಸಂಬಂಧಿತ ಕೆಲಸಗಳಿಗಾಗಿ ಕೂಡ ತಾಲೂಕು ಕೇಂದ್ರಕ್ಕೆ ಪದೇಪದೇ ಭೇಟಿ ನೀಡಬೇಕಾಗಿರುವುದರಿಂದ ಸಮಯ ಮತ್ತು ಹಣ ವ್ಯಯವಾಗುತ್ತಿದ್ದು, ಸಾರ್ವಜನಿಕರು ಅನಾನುಕೂಲ ಎದುರಿಸುತ್ತಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಗಾಣಧಾಳ ಗ್ರಾಮದ ಭೌಗೋಳಿಕ ಮತ್ತು ಆಡಳಿತಾತ್ಮಕ ಮಹತ್ವವನ್ನು ಪರಿಗಣಿಸಿ, ಗಾಣಧಾಳ ಗ್ರಾಮವನ್ನು ಹೋಬಳಿ ಕೇಂದ್ರವನ್ನಾಗಿ ಘೋಷಿಸಿ, ಇಲ್ಲಿ ನಾಡ ಕಚೇರಿ ಸ್ಥಾಪಿಸಲು ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಶಿಫಾರಸು ಮಾಡಬೇಕು ಎಂದು ತಹಸೀಲ್ದಾರರಿಗೆ ಸಲ್ಲಿಸಿದ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಮಾನಯ್ಯ ಮಾಲಿ ಪಾಟೀಲ್ ಗಾಣಧಾಳ, ಕೊಳಪ್ಪ ದೇಸಾಯಿ ಕಕ್ಕಲದೊಡ್ಡಿ, ಮಲ್ಲಿಕಾರ್ಜುನ ಯಲಗಟ್ಟಿ, ಗಾಣಧಾಳ ಗ್ರಾಮ ಪಂಚಾಯಿತಿ ಅಧ್ಯಕ್ಷರು, ನರಸಣ್ಣ ನಾಯಕ ಗಾಣಧಾಳ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷರು, ಬಸವರಾಜ ನಾಯಕ ಕಾವಲಿ ಗಾಣಧಾಳ, ಶಿವರಾಜ ನಾಯಕ ಜಿಲ್ಲೆ ಕಮಲದಿನ್ನಿ, ಸೋಫಿ ಸಾಹೇಬು, ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು, ಬಸವರಾಜ ದೊಡ್ಮನೆ ಗಾಣಧಾಳ, ಶಿವರಾಜ ನಾಯಕ ಮಂಡಲಗುಡ್ಡ, ಶಿವಪ್ಪ ನಾಯಕ ಕಕ್ಕಲದೊಡ್ಡಿ, ವಾಲ್ಮೀಕಿ ಸ್ವಾಭಿಮಾನಿ ಚಳವಳಿ ಸಂಘದ ತಾಲೂಕು ಅಧ್ಯಕ್ಷರು ದೇವದುರ್ಗ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವೃದ್ಧರ ಸೇವೆ ಈಶ್ವರ ಸೇವೆಯಂತೆ ಗೌರಮ್ಮ ಕುಡತನಿ

❏ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ವೃದ್ಧರ ಸೇವೆ ಮಾಡುವ ಮೂಲಕ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ವೃದ್ಧರ ಸೇವೆ ಈಶ್ವರ ಸೇವೆಯಂತೆ ಎಂದು ಇನ್ನರ್ ವೀಲ್ ಕ್ಲಬ್ ಆಫ್ ಕುಷ್ಟಗಿ ಅಧ್ಯಕ್ಷೆ ಗೌರಮ್ಮ ಕುಡತನಿ ಹೇಳಿದರು.

ಇಳಕಲ್‌ನ ಸುರಕ್ಷಾ ಸೇವಾ ಸಂಸ್ಥೆಯ ಅನಾಥಾಶ್ರಮ ಹಾಗೂ ವೃದ್ಧಾಶ್ರಮದಲ್ಲಿ ಇನ್ನರ್ ವೀಲ್ ಕ್ಲಬ್ ಆಫ್ ಕುಷ್ಟಗಿ ವತಿಯಿಂದ ಹಮ್ಮಿಕೊಂಡಿದ್ದ ಸೇವಾ ಕಾರ್ಯಕ್ರಮದ ನೇತೃತ್ವ ವಹಿಸಿ ಅವರು ಮಾತನಾಡಿದರು. ಆಶ್ರಮದಲ್ಲಿರುವ ವೃದ್ಧರ ಅನುಕೂಲ ಹಾಗೂ ಸೌಕರ್ಯಕ್ಕಾಗಿ ಕ್ಲಬ್ ವತಿಯಿಂದ 15 ಕಬ್ಬಿಣದ



ಮಂಚಗಳನ್ನು ಕೊಡುಗೆಯಾಗಿ ನೀಡಲಾಯಿತು. ಅಲ್ಲದೆ, ದಿನನಿತ್ಯದ ಬಳಕೆಗೆ ಅಗತ್ಯವಿರುವ ರೇಷನ್ ಹಾಗೂ ಅಡುಗೆ ಸಾಮಗ್ರಿಗಳು, ಸೀರೆಗಳು ಮತ್ತು ಔಷಧಿ ವೆಚ್ಚಕ್ಕಾಗಿ ಧನ ಸಹಾಯವನ್ನು ಕ್ಲಬ್‌ನ ಸದಸ್ಯರು ಒಟ್ಟಾಗಿ ನೀಡಿದರು.

ಈ ಸಂದರ್ಭದಲ್ಲಿ ಕ್ಲಬ್‌ನ ಸದಸ್ಯರು



ಆಶ್ರಮದ ವೃದ್ಧರೊಂದಿಗೆ ಕೆಲ ಸಮಯ ಆತ್ಮೀಯವಾಗಿ ಬೆರೆತು, ಅವರೊಂದಿಗೆ ಮಾತನಾಡಿ, ಅಗತ್ಯಗಳನ್ನು ಆಲಿಸಿದರು. ಪ್ರೀತಿ, ಕಾಳಜಿ ಹಾಗೂ ಆತ್ಮೀಯತೆಯನ್ನು ಹಂಚಿಕೊಂಡರು. ಸೇವಾ ಕಾರ್ಯದಿಂದ ಆಶ್ರಮವಾಸಿಗಳ ಮುಖದಲ್ಲಿ ಮೂಡಿದ ಸಂತೋಷದ ನಗು ಎಲ್ಲರ ಮನಸೂರೆಗೊಂಡಿತು. ಮಾನವೀಯತೆ, ಕಾಳಜಿ ಹಾಗೂ ಸೇವಾ ಮನೋಭಾವಕ್ಕೆ ಮಾದರಿಯಾದ ಈ ಕಾರ್ಯಕ್ರಮವು ಸಮಾಜದಲ್ಲಿ ಹಿರಿಯರ ಗೌರವ ಮತ್ತು ಕಾಳಜಿಯ ಮಹತ್ವವನ್ನು ಸಾರಿತು.

ಕಾರ್ಯಕ್ರಮದಲ್ಲಿ ಇನ್ನರ್ ವೀಲ್ ಕ್ಲಬ್ ಅಧ್ಯಕ್ಷೆ ಗೌರಮ್ಮ ಕುಡತನಿ, ಖಜಾಂಚಿ ಪ್ರಭಾ ಬಂಗಾರ ಶೆಟ್ಟರ್, ಎಡಿಟರ್ ಶಾರದ ಶೆಟ್ಟರ್, ಮಮತಾ ಮಾನ್ವಿ, ಶಾರದಮ್ಮ ಕುಡತನಿ, ಶಿವಲೀಲಾ ಹಿರೇಮಠ, ಅಡಿವೆಮ್ಮ ಹಿರೇಮಠ, ಶಾರದ ಜಿಗಜಿನ್ನಿ, ಪ್ರೇಮಾ ಪಾಟೀಲ್, ಗಿರಿಜಾ ನಾಗೋಡ್, ಸುಮಿತ್ರಾ ಕಂಠಿ, ಆಶ್ರಮದ ಕಾರ್ಯದರ್ಶಿ ಬಾಲಚಂದರ್ ಹಾಗೂ ಆಶ್ರಮವಾಸಿಗಳು ಉಪಸ್ಥಿತರಿದ್ದರು.

ಕೆನಡಾದ ಕಾಮನ್‌ವೆಲ್ತ್ ಪವರ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ವಿಜಯಪುರದ ಸಚಿನ್ ತುಕಾರಾಮ ಸಾಳುಂಕೆ ಸಾಧನೆ

❏ ನೈಜ್ಯ ದೆಸೆ ನ್ಯೂಸ್

ವಿಜಯಪುರ: ಕೆನಡಾ ದೇಶದಲ್ಲಿ ಸೆಪ್ಟೆಂಬರ್ 17ರಿಂದ 27ರವರೆಗೆ ನಡೆದ ಕಾಮನ್‌ವೆಲ್ತ್ ಪವರ್‌ಲಿಫ್ಟಿಂಗ್ ಸ್ಪರ್ಧೆಯಲ್ಲಿ ಭಾರತ ದೇಶವನ್ನು ಪ್ರತಿನಿಧಿಸಿದ ವಿಜಯಪುರ ಜಿಲ್ಲೆಯ ಕ್ರೀಡಾಪಟು ಶ್ರೀ ಸಚಿನ್ ತುಕಾರಾಮ ಸಾಳುಂಕೆ ಅವರು ಬೆಳ್ಳಿ ಪದಕ ಗೆಲ್ಲುವ ಮೂಲಕ ದೇಶಕ್ಕೆ ಹಾಗೂ ವಿಜಯಪುರ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆದ ಈ ಪ್ರತಿಷ್ಠಿತ ಕ್ರೀಡಾಕೂಟದಲ್ಲಿ 105 ಕೆ.ಜಿ. ತೂಕದ ವಿಭಾಗದಲ್ಲಿ ಸ್ಪರ್ಧಿಸಿದ ಸಚಿನ್ ತುಕಾರಾಮ ಸಾಳುಂಕೆ ಅವರು ತಮ್ಮ ಅದ್ಭುತ ದೈಹಿಕ ಸಾಮರ್ಥ್ಯ, ಕಠಿಣ ಪರಿಶ್ರಮ ಹಾಗೂ ಸತತ ಅಭ್ಯಾಸದ ಮೂಲಕ ಗಮನಾರ್ಹ ಪ್ರದರ್ಶನ ನೀಡಿದ್ದಾರೆ. ಸ್ಕ್ವಾಟ್ ವಿಭಾಗದಲ್ಲಿ 310 ಕೆ.ಜಿ., ಬೆಂಚ್ ಪ್ರೆಸ್‌ನಲ್ಲಿ 180 ಕೆ.ಜಿ. ಹಾಗೂ ಡೆಡ್‌ಲಿಫ್ಟ್‌ನಲ್ಲಿ 270 ಕೆ.ಜಿ. ಭಾರ ಎತ್ತುವ ಮೂಲಕ ತಮ್ಮ ಶಕ್ತಿಯನ್ನು ಪ್ರದರ್ಶಿಸಿ ಬೆಳ್ಳಿಯ ಪದಕವನ್ನು ತಮ್ಮದಾಗಿಸಿಕೊಂಡಿದ್ದಾರೆ.



ಪವರ್‌ಲಿಫ್ಟಿಂಗ್ ಕ್ರೀಡೆಯಲ್ಲಿ ಅಂತರರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುವುದು ಸುಲಭದ ಮಾತಲ್ಲ. ಇದಕ್ಕಾಗಿ ದೀರ್ಘಕಾಲದ ತರಬೇತಿ, ಕಠಿಣ ಪರಿಶ್ರಮ, ಶಿಸ್ತುಬದ್ಧ ಜೀವನಶೈಲಿ, ದೈಹಿಕ ಸಾಮರ್ಥ್ಯ ಹಾಗೂ ಮಾನಸಿಕ ದೃಢತೆ ಅತ್ಯಗತ್ಯ.

ಇಂತಹ ಸವಾಲುಗಳನ್ನು ಎದುರಿಸಿ ಕೆನಡಾದಲ್ಲಿ ನಡೆದ ಕಾಮನ್‌ವೆಲ್ತ್ ಮಟ್ಟದ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿ ಪದಕ ಗೆದ್ದಿರುವುದು ಸಚಿನ್ ಅವರ ಕ್ರೀಡಾ ಜೀವನದ ಮಹತ್ವದ ಸಾಧನೆಯಾಗಿದೆ. ಗ್ರಾಮೀಣ ಭಾಗದಿಂದ ಬೆಳೆದು ಅಂತರರಾಷ್ಟ್ರೀಯ ಕ್ರೀಡಾ ವೇದಿಕೆಯಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸುವ ಮೂಲಕ ಸಚಿನ್ ತುಕಾರಾಮ ಸಾಳುಂಕೆ ಅವರು ಜಿಲ್ಲೆಯ ಯುವಜನರಿಗೆ ಮಾದರಿಯಾಗಿದ್ದಾರೆ. ಸಾಧನೆಗೆ ಯಾವುದೇ ಅಡೆತಡೆಗಳು ಶಾಶ್ವತವಲ್ಲ; ಗುರಿಯ ಬಗ್ಗೆ ಸ್ಪಷ್ಟತೆ, ನಿರಂತರ ಅಭ್ಯಾಸ ಮತ್ತು ಪರಿಶ್ರಮ ಇದ್ದರೆ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಯಶಸ್ಸು ಸಾಧಿಸಬಹುದು ಎಂಬುದನ್ನು ಅವರ ಸಾಧನೆ ಸಾರುತ್ತದೆ. ಕ್ರೀಡಾಪಟುಗಳ ಸಾಧನೆ ದೇಶದ ಗೌರವವನ್ನು ಹೆಚ್ಚಿಸುವುದರ ಜೊತೆಗೆ ಮುಂದಿನ ಪೀಳಿಗೆಯ ಯುವಕರಲ್ಲಿ ಕ್ರೀಡೆಯ ಬಗ್ಗೆ ಆಸಕ್ತಿ ಮೂಡಿಸುತ್ತದೆ.

ಈ ನಿಟ್ಟಿನಲ್ಲಿ ಸಚಿನ್ ಅವರ ಸಾಧನೆ ವಿಜಯಪುರ ಜಿಲ್ಲೆಗೆ ಹೆಮ್ಮೆಯ ಸಂಗತಿಯಾಗಿದೆ. ಅವರ ಯಶಸ್ಸು ಜಿಲ್ಲೆಯ ಇತರ ಕ್ರೀಡಾಪಟುಗಳಿಗೂ ಪ್ರೇರಣೆ ನೀಡಲಿದ್ದು, ಪವರ್‌ಲಿಫ್ಟಿಂಗ್ ಸೇರಿದಂತೆ ವಿವಿಧ ಕ್ರೀಡಾ ಕ್ಷೇತ್ರಗಳಲ್ಲಿ ಯುವಕರು ಹೆಚ್ಚಿನ ಆಸಕ್ತಿ ವಹಿಸಲು ಉತ್ತೇಜನ ನೀಡಲಿದೆ. ಕೆನಡಾದಲ್ಲಿ ನಡೆದ ಈ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿ ಬೆಳ್ಳಿ ಪದಕ ಗೆದ್ದಿರುವ ಸಚಿನ್ ತುಕಾರಾಮ ಸಾಳುಂಕೆ ಅವರಿಗೆ ಕ್ರೀಡಾಭಿಮಾನಿಗಳು, ಸಾರ್ವಜನಿಕರು ಹಾಗೂ ಜಿಲ್ಲೆಯ ಜನರಿಂದ ಅಭಿನಂದನೆಗಳು ವ್ಯಕ್ತವಾಗುತ್ತಿವೆ. ಮುಂದಿನ ದಿನಗಳಲ್ಲಿಯೂ ಅವರು ಇನ್ನಷ್ಟು ಉನ್ನತ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಚಿನ್ನದ ಪದಕಗಳನ್ನು ಗೆದ್ದು ದೇಶದ ಕೀರ್ತಿಯನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಲಿ ಎಂಬ ಆಶಯ ವ್ಯಕ್ತವಾಗಿದೆ. ವಿಜಯಪುರ ಜಿಲ್ಲೆಯ ಕ್ರೀಡಾ ಕ್ಷೇತ್ರಕ್ಕೆ ಹೆಮ್ಮೆಯ ಕಿರೀಟವಾಗಿ ಮೂಡಿಬಂದಿರುವ ಸಚಿನ್ ತುಕಾರಾಮ ಸಾಳುಂಕೆ ಅವರ ಈ ಸಾಧನೆ ನಿಜಕ್ಕೂ ಅಭಿನಂದನಾರ್ಹವಾಗಿದೆ.

ಬರ ನಿರ್ವಹಣೆಗೆ ಕೇಂದ್ರದ ಅನುದಾನ ದೊರೆಯದಿದ್ದರೆ ಸುಪ್ರೀಂಗೆ ಮೊರೆ : ಡಿಸಿಎಂ ಪರಮೇಶ್ವರ್

❏ ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ಬರ ನಿರ್ವಹಣೆಗೆ ಕೇಂದ್ರ ಸರ್ಕಾರದಿಂದ ಅನುದಾನ ದೊರೆಯದೇ ಇದ್ದರೆ ಮತ್ತೆ ಸುಪ್ರೀಂ ಕೋರ್ಟ್ ಮೊರೆ ಹೋಗುವುದು ಅನಿವಾರ್ಯ ವಾಗಲಿದೆ ಎಂದು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಹೇಳಿದ್ದಾರೆ. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ಹಾಗೂ ಸಂಬಂಧಪಟ್ಟವರು ಅಂತಹ ಅವಕಾಶವನ್ನು ನೀಡಬಾರದು ಎಂದು ಹೇಳಿದರು.

ರಾಜ್ಯದಲ್ಲಿನ ಬರ ಅಧ್ಯಯನಕ್ಕಾಗಿ ಕೇಂದ್ರದಿಂದ ಹಿರಿಯ ಅಧಿಕಾರಿಗಳನ್ನೊಳಗೊಂಡ 3 ತಂಡಗಳು ರಾಜ್ಯಕ್ಕಾಗಮಿಸಲಿವೆ. ತುಮಕೂರು, ಚಿತ್ರದುರ್ಗ, ದಾವಣಗೆರೆ ಭಾಗದಲ್ಲಿ ಒಂದು ತಂಡ, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಮತ್ತೊಂದು ತಂಡ



ಹಾಗೂ ಮಂಡ್ಯ, ಮೈಸೂರು, ಚಾಮರಾಜನಗರ ಸೇರಿದಂತೆ ಮೈಸೂರು ಭಾಗದಲ್ಲಿ ಮೂರನೇ ತಂಡ ಅಧ್ಯಯನ ನಡೆಸಲಿದೆ ಎಂದು ಹೇಳಿದರು. ಕೇಂದ್ರದ ತಂಡಗಳು ಬರಪೀಡಿತ ಪ್ರದೇಶಗಳಲ್ಲಿ ಅಧ್ಯಯನ ನಡೆಸಿ ತಮ ವರದಿಯನ್ನು ಸಲ್ಲಿಸಲಿವೆ. ರಾಜ್ಯ ಸರ್ಕಾರ ಈಗಾಗಲೇ ಕೇಂದ್ರಕ್ಕೆ ಮೆಮೊರಾಂಡಂ ಸಲ್ಲಿಸಿದ್ದು, ಅದರ ಆದಾರದ ಮೇಲೆಯೇ ಕೇಂದ್ರದ ತಂಡಗಳು ಪರಿಶೀಲನೆ ನಡೆಸಲಿವೆ. ಇದರ ಜೊತೆಗೆ ರಾಜ್ಯ ಸರ್ಕಾರದಿಂದ ಮತ್ತೊಂದು ಮೆಮೊರಾಂಡಂ ಕೂಡ ಸಲ್ಲಿಸಲಾಗುವುದು ಎಂದು ಹೇಳಿದರು. ಕೇಂದ್ರದ ತಂಡಗಳಿಗೆ ತಮದೇ ಆದ ಮಾರ್ಗಸೂಚಿಗಳಿವೆ. ರಾಜ್ಯ ಸರ್ಕಾರವೂ ಬರ ತಾಲ್ಲೂಕುಗಳನ್ನು ಘೋಷಿಸುವ ಸಂದರ್ಭದಲ್ಲಿ ಇದೇ ಮಾರ್ಗಸೂಚಿಗಳನ್ನು ಅನುಸರಿಸಿದೆ ಎಂದು ಹೇಳಿದರು.

ಮಾರ್ಗಸೂಚಿಗಳ ವ್ಯಾಪ್ತಿಗೆ ಒಳಪಡದ ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿಲ್ಲ. ಸದ್ಯ ಇನ್ನಷ್ಟು ಗ್ರೌಂಡ್ ಟ್ರೂಥಿಂಗ್ ನಡೆಯುತ್ತಿದೆ. ಅದು ಪೂರ್ಣಗೊಂಡ ಬಳಿಕ ಅಂತಿಮ ಮೆಮೊರಾಂಡಂ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು. ಸೆಪ್ಟೆಂಬರ್ 30ಕ್ಕೆ ಮುಂಗಾರು ಅವಧಿ ಮುಕ್ತಾಯವಾಗಲಿದ್ದು, ಅದರ ನಂತರ ಅಕ್ಟೋಬರ್ ಮೊದಲ ವಾರದಲ್ಲೇ ಅಂತಿಮ ಮೆಮೊರಾಂಡಂ ಸಲ್ಲಿಸಲು ಉದ್ದೇಶಿಸಲಾಗಿದೆ. ರಾಜ್ಯದ ನಷ್ಟ ಹಾಗೂ ಅಗತ್ಯವಿರುವ ಪರಿಹಾರದ ಕುರಿತು ಸಮಗ್ರ ಮಾಹಿತಿಯನ್ನು ಒಳಗೊಂಡ ವರದಿಯನ್ನು ಕೇಂದ್ರದ ಮುಂದೆ ಮಂಡಿಸಲಾಗುವುದು ಎಂದು ಹೇಳಿದರು. ಬರ ಯಾವುದೇ ಪಕ್ಷದ ಸಮಸ್ಯೆಯಲ್ಲ. ಇದು ಕರ್ನಾಟಕದ ಜನರ ಹಿತಾಸಕ್ತಿಗೆ ಸಂಬಂಧಿಸಿದ ವಿಷಯ. ಆದ್ದರಿಂದ ಎಲ್ಲರೂ ತಮ ಜವಾಬ್ದಾರಿಯನ್ನು ಹಂಚಿಕೊಳ್ಳಬೇಕು. ಕೇಂದ್ರಕ್ಕೆ ಮನವಿ ಸಲ್ಲಿಸುವ ಸಂದರ್ಭದಲ್ಲಿ ಬಿಜೆಪಿಯವರೂ ನಮೊಂದಿಗೆ ಬರಬೇಕು ಎಂದು ಮತ್ತೊಮೆ ಮನವಿ ಮಾಡುವುದಾಗಿ ಅವರು ಹೇಳಿದರು.

ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುವ ಸಂದರ್ಭದಲ್ಲಿ ಅವುಗಳಿಗೆ ಹೆಚ್ಚಿನ ಹಣ ಅಗತ್ಯವಿದೆ ಎಂದು ಮೊದಲೇ ತಿಳಿದಿತ್ತು.

ಉತ್ತರ ಪ್ರದೇಶದಲ್ಲಿ ಮಹಾಮಳೆಗೆ ಈವರೆಗೆ 56 ಮಂದಿ ಬಲಿ

❏ ನೈಜ್ಯ ದೆಸೆ ನ್ಯೂಸ್

ಲಖನೌ: ಕಳೆದ ಮೂರ್ನಾಲ್ಕು ದಿನಗಳಿಂದ ಉತ್ತರ ಪ್ರದೇಶದಲ್ಲಿ ಸುರಿಯುತ್ತಿರುವ ಧಾರಾಕಾರ ಮಳೆಗೆ ಇದುವರೆಗೆ 56 ಮಂದಿ ಪ್ರಾಣ ಕಳೆದುಕೊಂಡಿದ್ದು, 40ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ.ಈ ಪೈಕಿ ಸೀತಾಪುರದಲ್ಲಿ ಏಳು ಮಂದಿ ಸಾವನ್ನಪ್ಪಿದ್ದು, ಅತಿ ಹೆಚ್ಚು ಸಾವು ಸಂಭವಿಸಿರುವ ಜಿಲ್ಲೆ ಇದಾಗಿದೆ. ಲಖಿಂಪುರ ಖೇರಿ, ಬಹ್ರೈಚ್ ಮತ್ತು ಬಲರಾಮ್‌ಪುರದಲ್ಲಿ ತಲಾ ಐದು ಮಂದಿ ಹಾಗೂ ಅಯೋಧ್ಯೆ ಮತ್ತು ಗೋರಖ್‌ಪುರದಲ್ಲಿ ತಲಾ ನಾಲ್ವರು ಸಾವನ್ನಪ್ಪಿದ್ದಾರೆ.

ಅಧಿಕಾರಿಗಳ ಮಾಹಿತಿ ಪ್ರಕಾರ, ರಾಜ್ಯಾದ್ಯಂತ 63 ಜಿಲ್ಲೆಗಳಲ್ಲಿ ಭಾರೀ ಮಳೆ



ದಾಖಲಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಸರಾಸರಿ 45.1 ಮಿ.ಮೀ. ಮಳೆ ದಾಖಲಾಗಿದೆ. ಈವರೆಗೆ 1,021 ಮನೆಗಳು ಹಾನಿಗೊಳಗಾಗಿವೆ. ಮುಂದಿನ 24 ಗಂಟೆಗಳ ಬಳಿಕ ರಾಜ್ಯದ ಹವಾಮಾನದಲ್ಲಿ ಬದಲಾವಣೆಯಾಗುವ ನಿರೀಕ್ಷೆಯಿದೆ. ಇದರ ನಡುವೆ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಎಚ್ಚರಿಕೆ ನೀಡಲಾಗಿದೆ.

ಇದರಿಂದಾಗಿ ಘಾಗ್ರಾ ಹಾಗೂ ರಾಪ್ತಿ ನದಿಗಳ ನೀರಿನ ಮಟ್ಟ ಏರಿಕೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಜಲ ಆಯೋಗ ತಿಳಿಸಿದೆ.ಲಖನೌನಲ್ಲಿ ಭಾರೀ ಮಳೆಯಿಂದಾಗಿ ಐತಿಹಾಸಿಕ ಗೇಟ್‌ನ ಒಂದು ಭಾಗ ಕುಸಿದುಬಿದ್ದಿದೆ. ಈ ಪ್ರದೇಶದಲ್ಲಿ ಸಾಮಾನ್ಯವಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಹಾಗೂ ಪಾದಚಾರಿಗಳ ಓಡಾಟವಿರುತ್ತದೆ. ಆದರೆ ಘಟನೆ ಸಂಭವಿಸಿದ ಸಮಯದಲ್ಲಿ ಕಡಿಮೆ ಜನರಿದ್ದ ಕಾರಣ ಯಾವುದೇ ಅವಘಡ ಸಂಭವಿಸಿಲ್ಲ.

ಇದಲ್ಲದೆ, ಅಲ್ಲಲ್ಲಿ ವಾಹನಗಳ ಮೇಲೆ ಮರಗಳು ಬಿದ್ದಿರುವ ಘಟನೆಗಳೂ ವರದಿಯಾಗಿವೆ. ಸದ್ಯ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ನೇಪಾಳದ ಗಡಿಗೆ ಹೊಂದಿಕೊಂಡಿರುವ ಜಿಲ್ಲೆಗಳಲ್ಲಿ ವಿಶೇಷ ನಿಗಾ ವಹಿಸಲಾಗಿದೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ರಕ್ಷಣಾ ತಂಡಗಳು ಎಚ್ಚರಿಕೆಯಿಂದ ಕಾರ್ಯನಿರ್ವಹಿಸುವಂತೆ ನಿರ್ದೇಶನ ನೀಡಿದ್ದಾರೆ. ಜಿಲ್ಲಾಧಿಕಾರಿಗಳು ಹಾಗೂ ಇತರ ಅಧಿಕಾರಿಗಳು ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ, ತಕ್ಷಣದ ನೆರವು ಒದಗಿಸುವಂತೆ ಸೂಚಿಸಿದ್ದಾರೆ.

ವಚನ ದರ್ಶನ

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ಹೊಸ್ತಿಲಲ್ಲಿ ಹುಲ್ಲು ಹುಟ್ಟಿ ಮನೆಯೊಳಗೆ ರಜ ತುಂಬಿ ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ ತನುವಿನಲ್ಲಿ ಹುಸಿ ತುಂಬಿ ಮನದೊಳಗೆ ವಿಷಯ ತುಂಬಿ ಮನದೊಳಗೆ [ಮನದೊ] ಡೆಯನಿದ್ದಾನೊಇಲ್ಲವೊ ಇಲ್ಲ ಕೂಡಲಸಂಗಮದೇವಾ

ಮನೆಯು ಸದಾ ಕಾಲ ಸ್ವಚ್ಛವಾಗಿರಬೇಕಾದರೆ ಮನೆಯಲ್ಲಿ ಒಡೆಯನಿರಬೇಕು. ಬೃಹತ್ತಾದ ಮನೆಯನ್ನು ಕಟ್ಟಿಸಿ ಅದರಲ್ಲಿ ಒಡೆಯನಿರದಿದ್ದರೆ ಅದು ಹಾಳು ಬಂಗಲೆಯಾಗುತ್ತದೆ. ಹೊಸ್ತಿಲಿನ ತುಂಬೆಲ್ಲಾ ಹುಲ್ಲು ಹುಟ್ಟಿ, ಆ ಮನೆಯು ಜೇಡರ ಬಲೆಯಿಂದ ಆವೃತವಾಗಿ, ಕಸದ ರಾಶಿಯಾಗಿ ಮಾರ್ಪಡುತ್ತದೆ. ಮಾನವನ ದೇಹವೆಂಬುದು ಕೂಡ ಮನೆ ಇದ್ದಂತೆಯೇ. ಚೈತನ್ಯದಿಂದ ಕೂಡಿದ ಆತ್ಮ ಇರದಿದ್ದರೆ, ಅದು ಸುಳ್ಳಿನಿಂದ ತುಂಬಿ, ಮನಸ್ಸು ಸದಾಕಾಲ ವಿಷಯವಾಸನೆಗಳಿಂದ ಕೂಡಿರುತ್ತದೆ. ಅದಕ್ಕೆ ಬಸವಣ್ಣನವರು ಬಹಿರಂಗದ ಮನೆಯಂತೆ, ಶರೀರವೆಂಬುದು ಮಾನವನ ಮನೆಯಾಗಿದೆ. ಇಲ್ಲಿ ಅಂತರಂಗ ಬಹಿರಂಗಗಳೆರಡೂ ಮುಖ್ಯವಾಗಿವೆ ಮತ್ತು ಅವು ಶುದ್ಧವಾಗಿರಬೇಕು ಎಂದು ತಿಳಿಸಿದ್ದಾರೆ. ಚೈತನ್ಯಯುಕ್ತವಾದ ಆತ್ಮವು ಮಾನವನನ್ನು ಮಹಾಂತನನ್ನಾಗಿ ಮಾಡುತ್ತದೆ ಎನ್ನುವುದು ಈ ವಚನದ ಸಾರವಾಗಿದೆ. ಇದನ್ನು ನಾವೆಲ್ಲರೂ ಪಾಲಿಸೋಣ.

ವಿಶ್ವಗುರು ಬಸವಣ್ಣನವರ ಈ ಚಿಕ್ಕ ವಚನ ಒಂದು ಸನ್ನಿವೇಶದ ಚಿತ್ರಣವನ್ನೇ ಸೃಷ್ಟಿಸಿದೆ. ಒಬ್ಬ ವ್ಯಕ್ತಿ ತಾನು ಬಯಸಿದ ಮನೆಯ ಯಜಮಾನನ್ನು ಅರಸುತ್ತಾ ಆ ಯಜಮಾನನಿರುವ ಮನೆಯ ಕಡೆಗೆ " ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ " ಎಂಬ ಸಂಶಯ ವ್ಯಕ್ತಪಡಿಸುತ್ತಾ ಬರುವುದು, ಬಾಗಿಲಿನ ಬಳಿ ಬಂದು ಹೊಸ್ತಿಲನ್ನು ನೋಡುವುದು ಅದರ ಮೇಲೆ ಹುಲ್ಲು ಹುಟ್ಟಿರುವುದ ಕಾಣುವುದು ಸಂಶಯ ಹೆಚ್ಚಿಸಿಕೊಂಡು ಒಳ ಪ್ರವೇಶಿಸಿ ಮನೆಯನ್ನೆಲ್ಲಾ ವೀಕ್ಷಿವುದು ಅಲ್ಲಿ ಧೂಳು ತುಂಬಿರುವುದ ಕಂಡು ಮನೆಯೊಡೆಯನ ಔಜಿಣಜಟಿ ಮನೆಯೊಡೆಯನಿಲ್ಲವಲ್ಲಾ ಎಂದು ವಿಷಾಧಿಸುವ ಚಿತ್ರಣವಿದೆ ಎಂದು ವಿವರಿಸಲಾಗಿದೆ. ಶರಣರ ವಚನಗಳು ದಾ–ರಿದೀಪವಾಗಿದೆ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ–ಸಿಂಧನೂರು. 998094144

ಕಂಪ್ಲಿ ಹಾಗೂ ಕೋಟೆಯ ವಿವಿಧ ವಾರ್ಡ್‌ಗಳಲ್ಲಿ 'ಫಾರ್ಮ್ 7' ದುರ್ಬಳಕೆ ಆರೋಪ; ಯುವಕರಿಂದ ಕಚೇರಿ ಮುತ್ತಿಗೆ, ಆಕ್ರೋಶ ಸಾರ್ವಜನಿಕರು ಸುಳ್ಳು ವದಂತಿಗಳಿಗೆ ಕಿವಿಗೊಡಬಾರದು : ತಹಶೀಲ್ದಾರ್ ಜೂಗಲ ಮಂಜು ನಾಯಕ್ ಎಚ್ಚರಿಕೆ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಮತದಾರರ ಪಟ್ಟಿಯಿಂದ ಅಕ್ರಮವಾಗಿ ಹೆಸರುಗಳನ್ನು ಕೈಬಿಡಲು ಚುನಾವಣಾ ಆಯೋಗದ 'ಫಾರ್ಮ್ 7' (Form 7) ಅರ್ಜಿಯನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿ ಕಂಪ್ಲಿ ಹಾಗೂ ಕೋಟೆ ಭಾಗದ ಯುವಕರು ಮತ್ತು ಸಾರ್ವಜನಿಕರು ಕಚೇರಿಗೆ ಮುತ್ತಿಗೆ ಹಾಕಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಘಟನೆ ನಡೆದಿದೆ.

ಪ್ರಸ್ತುತ ನಡೆಯುತ್ತಿರುವ ಮತದಾರರ ಪಟ್ಟಿ ಪರಿಷ್ಕರಣೆ (SIR) ಪ್ರಕ್ರಿಯೆಯನ್ನು ಬಳಸಿಕೊಂಡು, ಕಂಪ್ಲಿ ಕೋಟೆಯ ಹಾಗೂ ವಿವಿಧ ವಿವಿಧ ವಾರ್ಡ್‌ಗಳಲ್ಲಿ ಮುಸ್ಲಿಂ ಸಮುದಾಯದ ಮತದಾರರನ್ನು ಗುರಿಯಾಗಿಸಿಕೊಂಡು ಅವರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಲು ವ್ಯವಸ್ಥಿತ ಸಂಚು ನಡೆಯುತ್ತಿದೆ ಎಂದು ಸ್ಥಳೀಯರು ಗಂಭೀರವಾಗಿ ಆರೋಪಿಸಿದ್ದಾರೆ. ಮುಸ್ಲಿಂ ಮತದಾರರ ಮೇಲೆ ಒತ್ತಡ ಹೇರಿ, ಅವರ ಅನುಮತಿಯಿಲ್ಲದೆ ಫಾರ್ಮ್ 7 ರ ಅಡಿಯಲ್ಲಿ ಆಕ್ಷೇಪಣೆ ಅರ್ಜಿಗಳನ್ನು ಸಲ್ಲಿಕೆ



ಮಾಡಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಪ್ರತಿಭಟನಾಕಾರರು ದೂರಿದ್ದಾರೆ. ಕೆಲವರು ರಾಜಕೀಯ ಪ್ರಭಾವ ಬಳಸಿ ಈ ಅಕ್ರಮ ಎಸಗುತ್ತಿದ್ದಾರೆ ಎಂದು ಆರೋಪಿಸಿದ ಆಕ್ರೋಶಿತ ಯುವಕರ ತಂಡವು, ಕಂಪ್ಲಿ ತಹಶೀಲ್ದಾರ್ ಕಚೇರಿಗೆ ದಿಢೀರ್ ಮುತ್ತಿಗೆ ಹಾಕಿತು. ಸ್ಥಳದಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಯುವಕರು, "ಯಾವುದೇ ಅರ್ಹ ಮತದಾರರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಬಾರದು. ಯಾರದ್ದೋ ಒತ್ತಡಕ್ಕೆ ಮಣಿದು ಅರ್ಜಿಗಳನ್ನು ಅಂಗೀಕರಿಸಿದರೆ ಉಗ್ರ ಹೋರಾಟ ಮಾಡಲಾಗುವುದು" ಎಂದು ಎಚ್ಚರಿಕೆ ನೀಡಿದರು. ಸ್ಥಳಕ್ಕೆ ಧಾವಿಸಿದ ಪೊಲೀಸರು ಮತ್ತು ಹಿರಿಯ ಅಧಿಕಾರಿಗಳು ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿ, ಕಾನೂನುಬಾಹಿರವಾಗಿ ಯಾವುದೇ ಹೆಸರುಗಳನ್ನು ತೆಗೆದುಹಾಕುವುದಿಲ್ಲ ಹಾಗೂ ನಿಯಮಾನುಸಾರ ತನಿಖೆ ನಡೆಸಲಾಗುವುದು ಎಂದು ಭರವಸೆ ನೀಡಿದ ಬಳಿಕ ಪರಿಸ್ಥಿತಿ ತಿಳಿಯಾಯಿತು.

ತಹಶೀಲ್ದಾರ್ ಪ್ರತಿಕ್ರಿಯೆ: “ನಿಮ್ಮ ಬಳಿ ಹರಿದಾಡುತ್ತಿರುವ ಅರ್ಜಿಗಳು ನಮ್ಮ ಅಧಿಕೃತ ದಾಖಲೆಗಳಲ್ಲ. ಯಾವುದೇ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕಲು ನಿಗದಿತ ಕಾನೂನು ಪ್ರಕ್ರಿಯೆ ಇದೆ. ಸಂಬಂಧಪಟ್ಟ ವ್ಯಕ್ತಿಗೆ ನೋಟಿಸ್ ನೀಡದೇ ಮತದಾರರ ಹೆಸರನ್ನು ಅಳಿಸುವ ಪ್ರಶ್ನೆಯೇ ಇಲ್ಲ. ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡಬಾರದು.” ಅಲ್ಲದೆ, ಖIಖ ಪ್ರಕ್ರಿಯೆ ಕುರಿತು ಸುಳ್ಳು ಮಾಹಿತಿ ಹರಡುವುದು ಅಥವಾ ಅನಗತ್ಯ ಗೊಂದಲ ಸೃಷ್ಟಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕಂಪ್ಲಿ ತಹಶೀಲ್ದಾರ್ ಜೂಗಲ ಮಂಜು ನಾಯಕ್ ಎಚ್ಚರಿಕೆ ನೀಡಿದರು.

ಕಂಪ್ಲಿಯಲ್ಲಿ ಶಹೀದ್ ಭಗತ್ ಸಿಂಗ್ ಜಯಂತಿ ಸಡಗರ: ಕ್ರಾಂತಿಕಾರಿಯ ಹಾದಿಯಲ್ಲಿ ನಡೆಯಲು ಯುವಜನತೆಗೆ ಕರೆ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ತಮ್ಮ ವೀರತ್ವ ಹಾಗೂ ಬಲಿದಾನದ ಮೂಲಕ ಇಂದಿಗೂ ಕೋಟ್ಯಂತರ ಯುವಕರ ಹೃದಯದಲ್ಲಿ ಅಜರಾಮರಾಗಿರುವ ಮಹಾನ್ ಕ್ರಾಂತಿಕಾರಿ, ಶಹೀದ್ ಭಗತ್ ಸಿಂಗ್ ಅವರ ಜನ್ಮದಿನಾಚರಣೆಯನ್ನು ಇಂದು ಪಟ್ಟಣದ ಹೊಸ ಬಸ್ ನಿಲ್ದಾಣದ ಆವರಣದ ಹತ್ತಿರ ಅತ್ಯಂತ ಶ್ರದ್ಧೆ, ಗೌರವ ಹಾಗೂ ಸಡಗರದಿಂದ ಆಚರಿಸಲಾಯಿತು.

ಪಟ್ಟಣದ ಸಮಾಜಮುಖಿ ಸಂಘಟನೆಯಾದ 'ಭಗತ್ ಸಿಂಗ್ ಯುವಕ ಮಂಡಳಿ'ಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಈ ವಿಶೇಷ ಕಾರ್ಯಕ್ರಮದಲ್ಲಿ ನೂರಾರು ಯುವಕರು ಉತ್ಸಾಹದಿಂದ ಪಾಲ್ಗೊಂಡು ಕ್ರಾಂತಿಕಾರಿಯ ಸ್ಮರಣೆ ಮಾಡಿದರು. ಕಾರ್ಯಕ್ರಮದ ಅಂಗವಾಗಿ ಸಿದ್ಧಪಡಿಸಲಾಗಿದ್ದ ವೇದಿಕೆಯಲ್ಲಿ, ಹಳದಿ ಬಣ್ಣದ ಸಾಂಪ್ರದಾಯಿಕ ಪೇಟ ಧರಿಸಿದ ಭಗತ್ ಸಿಂಗ್ ಅವರ ಆಕರ್ಷಕ ಭಾವಚಿತ್ರವನ್ನು ಇರಿಸಲಾಗಿ–ತ್ತು. ಭಾವಚಿತ್ರಕ್ಕೆ ಸುಂದರವಾದ ಹೂವಿನ ಹಾರಗಳನ್ನು ಹಾಕಿ, ಸಾರ್ವಜನಿಕರು ಹಾಗೂ ಸಂಘಟನೆಯ ಪದಾಧಿಕಾರಿಗಳು ಜಂಟಿಯಾಗಿ ಪುಷ್ಪ ನಮನ ಸಲ್ಲಿಸಿದರು. ಬಳಿಕ ಭಾವಚಿತ್ರದ ಮುಂಭಾಗದಲ್ಲಿ ಬಿಳಿ ಹೂವುಗಳನ್ನು ರಾಶಿ ಹಾಕಿ ವಿಶೇಷ ಗೌರವ ಸಮರ್ಪಿಸಲಾಯಿತು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಾರ್ವಜನಿಕ–ರಿಗೆ ಹಾಗೂ ದಾರಿಹೋಕರಿಗೆ ಯುವಕರು ಸಿಹಿ ವಿತರಿಸಿ ಜಯಂತಿಯ ಶುಭಾಶಯ ವಿನಿಮಯ ಮಾಡಿಕೊಂಡರು.

ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದ ಭಗತ್ ಸಿಂಗ್ ಯುವಕ ಮಂಡಳಿಯ ಕೃಷ್ಣನಾಯಕ, "ದೇಶಕ್ಕಾಗಿ ಕೇವಲ 23ನೇ ವಯಸ್ಸಿಗೆ ಹಸನ್ಮುಖಿಯಾಗಿ ಗಲ್ಲು ಕಂಬ ಏರಿದ ವೀರಪುರುಷ ಭಗತ್ ಸಿಂಗ್. ಅವರ ವೈಚಾರಿಕ ಚಿಂತನೆಗಳು, ಅಪ್ರತಿಮ ದೇಶಭಕ್ತಿ ಮತ್ತು ಧೈರ್ಯ ಇಂದಿನ ಯುವ ಪೀಳಿಗೆಗೆ ಅತ್ಯಂತ ಅವಶ್ಯಕವಾಗಿವೆ. ಯುವಜನತೆ ಕೇವಲ ಆಚರಣೆಗಳಿಗೆ ಸೀಮಿತವಾಗದೆ, ಅವರಲ್ಲಿದ್ದ ದೇಶಪ್ರೇಮ ಹಾಗೂ ಸಾಮಾಜಿಕ ಜವಾಬ್ದಾ–ರಿಯ ಆದರ್ಶಗಳನ್ನು ತಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮಾಜದ ಪ್ರಗತಿಗೆ ಯುವಶಕ್ತಿ ಒಗ್ಗಟ್ಟಿನಿಂದ ಶ್ರಮಿಸುವುದೇ ನಾವು ಆ ಮಹಾತ್ಮನಿಗೆ ಸಲ್ಲಿಸುವ ನಿಜವಾದ ಗೌರವ" ಎಂದು ಮಾರ್ಮಿಕವಾಗಿ ನುಡಿದರು.



ಕಾರ್ಯಕ್ರಮದ ಮಧ್ಯೆ ನೆರೆದಿದ್ದ ಯುವಕರೆಲ್ಲರೂ ಒಕ್ಕೊರಲಿನಿಂದ ಕೂಗಿದ 'ಇಂಕ್ವಿಲಾಬ್ ಜಿಂದಾಬಾದ್', 'ಭಗತ್ ಸಿಂಗ್ ಅಮರರಾಗಲಿ', 'ಭಾರತ್ ಮಾತಾ ಕೀ ಜೈ' ಎಂಬ ಕ್ರಾಂತಿಕಾರಿ ಘೋಷಣೆಗಳು ಹೊಸ ಬಸ್ ನಿಲ್ದಾಣದ ಸುತ್ತಮುತ್ತಲಿನ ಪರಿಸರದಲ್ಲಿ ರಾಷ್ಟ್ರಪ್ರೇಮದ ಅಲೆ ಎಬ್ಬಿಸಿದವು.

ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಕ್ರಾಂತಿಕಾರಿಗಳ ಬಲಿದಾನ ವ್ಯರ್ಥ–'ವಾಗದಂತೆ ನೋಡಿಕೊಳ್ಳುವ ಪಣವನ್ನು ಯುವಕರು ಈ ಸಂದರ್ಭದಲ್ಲಿ ತೊಟ್ಟರು. ಕಾರ್ಯಕ್ರಮದಲ್ಲಿ ಭಗತ್ ಸಿಂಗ್ ಯುವಕ ಮಂಡಳಿಯ ಪ್ರಮುಖ ಪದಾಧಿಕಾರಿಗಳಾದ ಮೀನುಗಾರರ ವಿಜಯಕುಮಾರ್, ಲಬೇದ್ ವಿಶ್ವ, ಚಿನ್ನು, ಲೇಬೇದ್ ಯಮನೂರಿ, ಹೊಸಪೇಟೆ ವಿಶ್ವ, ಗೌತಮ್, ವೀರೇಶ್, ಪ್ರಕಾಶ್, ಗಣೇಶ್, ವಿಜಿ, ದುರ್ಗೇಶ್, ಕುಮಾರ್, ಸುಬ್ಬು, ಕೃಷ್ಣ, ಅಕ್ಷಯ್, ಉಡೆಗೊಳ್ ಮಂಜುನಾಥ ಸೇರಿದಂತೆ ಪಟ್ಟಣದ ವಿವಿಧ ಸಂಘ–ಸಂಸ್ಥೆಗಳ ಮುಖಂಡರು, ಸ್ಥಳೀಯ ವರ್ತಕರು ಹಾಗೂ ಅಪಾರ ಸಂಖ್ಯೆಯ ಯುವಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಶಿಕ್ಷಕರ ಕ್ಷೇತ್ರ ಚುನಾವಣೆ: ಕಂಪ್ಲಿಯಲ್ಲಿ ಬಿಜೆಪಿ ಮುಖಂಡರಿಂದ ಮತಬೇಟೆ

❑ ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ವಿಧಾನ ಪರಿಷತ್ತಿನ ಈಶಾನ್ಯ ಶಿಕ್ಷಕರ ಕ್ಷೇತ್ರದ ಮುಂಬರುವ ದ್ವೈವಾರ್ಷಿಕ ಚುನಾವಣೆಯ ಹಿನ್ನೆಲೆಯಲ್ಲಿ ಗರಿಗೆದ–ರಿದ 'ಈಶಾನ್ಯ ಶಿಕ್ಷಕರ' ಚುನಾವಣೆ, ಇಲ್ಲಿನ ವೀರಶೈವ ಸಂಘದ ಶಿಕ್ಷಣ ಸಂಸ್ಥೆಗಳಲ್ಲಿ ಬಿಜೆಪಿ ಅಭ್ಯರ್ಥಿ ಶಶೀಲ್ ಜಿ. ನಮೋಶಿ ಅವರ ಪರವಾಗಿ ಭರ್ಜರಿ ಮತಯಾಚನೆ ನಡೆಸಲಾಯಿತು.



ಮಾಜಿ ಶಾಸಕರಾದ ಜಿ. ಸೋಮಶೇಖರ್ ರೆಡ್ಡಿ ನೇತೃತ್ವದ ಪ್ರಮುಖ ಮುಖಂಡರ ತಂಡವು ಶಿಕ್ಷಣ ಸಂಸ್ಥೆಗಳ ಶಿಕ್ಷಕರನ್ನು ಮತದಾರರನ್ನು ಭೇಟಿ ಮಾಡಿ, ಈಶಾನ್ಯ ಶಿಕ್ಷಕರ ಕ್ಷೇತ್ರದ ಹಾಲಿ ಶಾಸಕರೂ ಹಾಗೂ ಬಿಜೆಪಿ ಅಭ್ಯರ್ಥಿಯೂ ಆದ ಶಶೀಲ್ ಜಿ. ನಮೋಶಿ ಅವರಿಗೆ ಪ್ರಥಮ ಪ್ರಾಶಸ್ತ್ಯದ ಮತ ನೀಡಿ ಅಧಿಕ ಬಹುಮತದಿಂದ ಗೆಲ್ಲಿಸಬೇಕೆಂದು ಕೋರಿದರು. ಸಭೆಯಲ್ಲಿ ಮಾತನಾಡಿದ ಮುಖಂಡರು, "ಶಿಕ್ಷಕರ ವೇತನ ತಾರತಮ್ಯ, ಅನುದಾನಿತ ಶಾಲೆಗಳ ಸಮಸ್ಯೆಗಳು ಮತ್ತು ಶೈಕ್ಷಣಿಕ ಕ್ಷೇತ್ರದ ಹಿತರಕ್ಷಣೆಗಾಗಿ ಶಶೀಲ್ ನಮೋಶಿ ಅವರು ನಿರಂತರವಾಗಿ ಶ್ರಮಿಸುತ್ತಿದ್ದಾರೆ ಶಶೀಲ್ ಜಿ ನಮೋಶಿ ಕಾರ್ಯಗಳು. ಅವರ ಕೈ ಬಲಪಡಿಸಲು ಪ್ರತಿಯೊಬ್ಬ ಶಿಕ್ಷಕ ಮತದಾರರು ಬಿಜೆಪಿಯನ್ನು ಬೆಂಬಲಿಸಬೇಕು" ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ದಿವಾಕರ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ ಅಳಲ್ಲಿ ವಿರೇಶ್, ಕಂಪ್ಲಿ ತಾಲೂಕು ಮಂಡಲ ಅಧ್ಯಕ್ಷರಾದ ಸಿ. ಡಿ. ಮಹದೇವ್ ಸೇರಿದಂತೆ ಬಿಜೆಪಿ ಪಕ್ಷದ ಪ್ರಮುಖರು ಹಾಗೂ ಶಿಕ್ಷಣ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರಿನ ಅರಮನೆ ಆವರಣದಲ್ಲಿ ನಮ್ಮ ನಾಡಿನ ನಾಡ ಹಬ್ಬ ದಸರಾ ಗಜಪಡೆಯನ್ನು ಆರೈಕೆ ಮಾಡುವ ಮಾವುತರು ಹಾಗೂ ಆನೆ ಪಾಲಕರ ಜೊತೆ ಉಪಹಾರ ಸೇವಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ಹಾಗೂ ಶಾಸಕರು

❑ ನೈಜ್ಯ ದೆಸೆ ನ್ಯೂಸ್

ತಾಂಡವಪುರ ಸೆಪ್ಟೆಂಬರ್ 28 ಸಾಂಸ್ಕೃತಿಕ ನಗರ ಮೈಸೂರಿನ ನಾಡ ದೇವತೆ ಚಾಮುಂಡೇಶ್ವರಿಯ ನಾಡಹಬ್ಬ ಮೈಸೂರು ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿರುವ ಗಜಪಡೆಯ ಮಾವುತರು ಹಾಗೂ ಆನೆ ಪಾಲಕರು ಹಾಗೂ ಅವರ ಕುಟುಂಬದವರಿಗೆ ಇಂದು ಏರ್ಪಡಿಸಿದ್ದ ಭೋಜನ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಹಾಗೂ ಶಾಸಕರಾದ ಜಿ ಟಿ ದೇವೇಗೌಡ ಅನಿಲ್ ಚಿಕ್ಕಮಾದು ಡಾ. ಡಿ ತಿಮ್ಮಯ್ಯ ರವರು ಭಾಗವಹಿಸಿ ಮಾವುತರ ಜೊತೆ ಭೋಜನ ಸವಿದರು

ಈ ಸಂದರ್ಭದಲ್ಲಿ ಮಾವುತರು ಹಾಗೂ ಕಾವಡಿಗರ ಕುಟುಂಬದವರಿಗೆ ಉಚಿತ



ಆರೋಗ್ಯ ತಪಾಸಣೆ ಹಾಗೂ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಆರೋಗ್ಯ ತಪಾಸಣೆ ಕೂಡ ಬಹಳ ಯಶಸ್ವಿಯಾಗಿ ನಡೆಯಿತು ಈ ಸಂದರ್ಭದಲ್ಲಿ ಶಾಸಕರಾದ ಜಿ.ಟಿ. ದೇವೇಗೌಡ, ಶ್ರೀ ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯರಾದ ಡಾ. ಡಿ. ತಿಮ್ಮಯ್ಯ ಮಾಜಿ ಶಾಸಕರಾದ ಸೋಮಶೇಖರ್. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ (ಏಇಂ)ದ ಅಧ್ಯಕ್ಷರಾದ ಆಯೂಬ್ ಖಾನ್, ಜಿಲ್ಲಾ ಪಂಚಾಯತ್ ಮಾಜಿ ಸದ್ಯಸರಾದ ರಾಕೇಶ್ ಪಾಪಣ್ಣ,

ಜಿಲ್ಲಾಧಿಕಾರಿಗಳಾದ ಜಿ. ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರಾದ ಮಹೇಶ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಯುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ಎಂ.ಕೆ. ಸವಿತ, ಅರಮನೆ ಮಂಡಳಿ ಉಪ ನಿರ್ದೇಶಕರಾದ ಸುಬ್ರಮಣ್ಯ ಅರಮನೆ ಹಾಗೂ ಮಂಡಳಿ ಅಧಿಕಾರಿಗಳು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಮುಖಂಡರುಗಳು ಹಾಜರಿದ್ದರು

ರಾಯಚೂರು ಜಿಲ್ಲೆಯ ವಸತಿ ನಿಲಯಗಳ ಅವ್ಯವಸ್ಥೆ ಸರಿಪಡಿಸಲು ದಲಿತ ವಿದ್ಯಾರ್ಥಿ ಪರಿಷತ್ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು: ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿಗಳ ವಸತಿ ನಿಲಯಗಳಲ್ಲಿನ ಅವ್ಯವಸ್ಥೆಗಳನ್ನು ಸರಿಪಡಿಸಿ, ವಿದ್ಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಅವರ ಶೈಕ್ಷಣಿಕ ಮತ್ತು ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಮಿತಿ, ರಾಯಚೂರು ವತಿಯಿಂದ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಕೃಷ್ಣ ಶಾವಂತಗೇರ ಅವರಿಗೆ ಮನವಿ ಸಲ್ಲಿಸಲಾಯಿತು.

ಜಿಲ್ಲೆಯ ವಿವಿಧ ವಸತಿ ನಿಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉತ್ತಮ ವಾತಾವರಣ ಮತ್ತು ಅಗತ್ಯ ಸೌಲಭ್ಯಗಳನ್ನು ಒದಗಿಸುವುದು ಇಲಾಖೆಯ ಪ್ರಮುಖ ಜವಾಬ್ದಾರಿಯಾಗಿದೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಬಂದು ವಿದ್ಯಾಭ್ಯಾಸ ಮಾಡುತ್ತಿರುವ ಬಡ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಂದುವ–ರಿಸಲು ವಸತಿ ನಿಲಯಗಳನ್ನು ಅವಲಂಬಿಸಿದ್ದಾರೆ. ಇಂತಹ ವಿದ್ಯಾರ್ಥಿಗಳಿಗೆ ಸಮರ್ಪಕ ಸೌಲಭ್ಯಗಳು ದೊರೆಯದಿದ್ದರೆ ಅವರ ಆರೋಗ್ಯ, ವಿದ್ಯಾಭ್ಯಾಸ ಮತ್ತು ಭವಿಷ್ಯದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಹೀಗಾಗಿ ವಸತಿ ನಿಲಯಗಳ



ಸಮಸ್ಯೆಗಳನ್ನು ನಿರ್ಲಕ್ಷಿಸದೆ ತಕ್ಷಣ ಪರಿಹ–ರಿಸಬೇಕು ಎಂದು ಪರಿಷತ್ ಆಗ್ರಹಿಸಿದೆ.

ವಸತಿ ನಿಲಯಗಳ ಸ್ಥಿತಿಗತಿ ಪರಿಶೀಲಿಸಲು ಆಗ್ರಹ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಜಿಲ್ಲೆಯ ವಿವಿಧ ವಸತಿ ನಿಲಯಗಳಿಗೆ ಖುದ್ದಾಗಿ ಭೇಟಿ ನೀಡಿ ಅಲ್ಲಿನ ವಾಸ್ತವಿಕ ಪರಿಸ್ಥಿತಿಯನ್ನು ಪರಿಶೀಲಿಸಬೇಕು. ವಿದ್ಯಾರ್ಥಿಗಳೊಂದಿಗೆ ನೇರವಾಗಿ ಚರ್ಚಿಸಿ, ಅವರು ಎದುರಿಸುತ್ತಿರುವ ಸಮಸ್ಯೆಗಳು, ಸೌಲಭ್ಯಗಳ ಕೊರತೆ ಹಾಗೂ ನಿರ್ವಹಣೆಯಲ್ಲಿನ ಲೋಪದೋಷಗಳನ್ನು ಗುರುತಿಸಬೇಕು. ಪರಿಶೀಲನೆಯ ಸಂದರ್ಭದಲ್ಲಿ ಕಂಡುಬರುವ ಸಮಸ್ಯೆಗಳಿಗೆ ಕಾಲಮಿತಿಯೊಳಗೆ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಹಾರ, ಶುದ್ಧ ಕುಡಿಯುವ ನೀರು, ಸ್ವಚ್ಛ ಶೌಚಾಲಯಗಳು, ಉತ್ತಮ ವಸತಿ ವ್ಯವಸ್ಥೆ, ವಿದ್ಯುತ್, ಸಮರ್ಪಕ ಬೆಳಕಿನ ವ್ಯವಸ್ಥೆ ಹಾಗೂ ಆರೋಗ್ಯಕರ ವಾತಾವರಣ ಲಭ್ಯವಾಗುವಂತೆ ನೋಡಿಕೊಳ್ಳಬೇಕು. ವಸತಿ ನಿಲಯಗಳ ಕೊಠಡಿಗಳು ಮತ್ತು ಆವರಣವನ್ನು ನಿಯಮಿತವಾಗಿ ಸ್ವಚ್ಛಗೊಳಿಸಬೇಕು. ವಿದ್ಯಾರ್ಥಿಗಳ ಆರೋಗ್ಯಕ್ಕೆ ತೊಂದರೆಯಾಗದಂತೆ ನೈರ್ಮಲ್ಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಪರಿಷತ್ ಮನವಿ ಮಾಡಿದೆ.

ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸುವುದು ಇಲಾಖೆಯ ಕರ್ತವ್ಯ ವಸತಿ ನಿಲಯಗಳಲ್ಲಿ ವಾಸಿಸುವ ವಿದ್ಯಾರ್ಥಿಗಳು ಕೇವಲ ವಸತಿ ಮತ್ತು ಆಹಾರಕ್ಕಾಗಿ ಮಾತ್ರವಲ್ಲದೆ, ತಮ್ಮ ಶೈಕ್ಷಣಿಕ ಗುರಿಗಳನ್ನು ಸಾಧಿಸಲು ಅನುಕೂಲಕರ ವಾತಾವರಣವನ್ನೂ ನಿರೀಕ್ಷಿಸುತ್ತಾರೆ. ವಿದ್ಯಾರ್ಥಿಗಳು ಯಾವುದೇ ಭಯವಿಲ್ಲದೆ ತಮ್ಮ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತರಲು ಅವಕಾಶ ಕಲ್ಪಿಸಬೇಕು. ವಿದ್ಯಾರ್ಥಿಗಳ ದೂರುಗಳನ್ನು ಗಂಭೀರವಾಗಿ ಪರಿಗಣಿಸಿ, ಅವುಗಳಿಗೆ ನ್ಯಾಯಯುತ ಪರಿಹಾರ ಒದಗಿಸಬೇಕು ಎಂದು ದಲಿತ ವಿದ್ಯಾರ್ಥಿ ಪರಿಷತ್ ಒತ್ತಾಯಿಸಿದೆ.

ವಿದ್ಯಾರ್ಥಿಗಳಿಗೆ ಸಿಗಬೇಕಾದ ಸೌಲಭ್ಯಗಳು ಸಮರ್ಪಕವಾಗಿ ದೊರೆಯುತ್ತಿವೆಯೇ ಎಂಬುದನ್ನು ಸಂಬಂಧಪಟ್ಟ ಅಧಿಕಾ–ರಿಗಳು ನಿರಂತರವಾಗಿ ಪರಿಶೀಲಿಸಬೇಕು. ವಸತಿ ನಿಲಯಗಳ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಕಂಡುಬಂದಲ್ಲಿ ಸಂಬಂಧಪಟ್ಟವರ ಗಮನಕ್ಕೆ ತಂದು ಅಗತ್ಯ ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅಡ್ಡಿಯಾಗುವ ಸಮಸ್ಯೆಗಳನ್ನು ತ್ವ–ರಿತವಾಗಿ ಪರಿಹರಿಸುವ ಮೂಲಕ ಅವರಿಗೆ ಉತ್ತಮ ಕಲಿಕಾ ವಾತಾವರಣ ನಿರ್ಮಿಸಬೇಕು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಶಿಕ್ಷಣದ ಹಕ್ಕು ಮತ್ತು ಗೌರವಯುತ ಜೀವನಕ್ಕೆ ಆದ್ಯತೆ ನೀಡಬೇಕು ಸಮಾಜದ ಹಿಂದುಳಿದ ಮತ್ತು ಆರ್ಥಿಕವಾಗಿ ದುರ್ಬಲ ವರ್ಗಗಳ ವಿದ್ಯಾರ್ಥಿಗಳಿಗೆ ಶಿಕ್ಷಣದ ಅವಕಾಶಗಳನ್ನು ವಿಸ್ತರಿಸುವಲ್ಲಿ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳು ಮಹತ್ವದ ಪಾತ್ರ ವಹಿಸುತ್ತವೆ. ಇಂತಹ ಸಂಸ್ಥೆಗಳಲ್ಲಿ ಸೌಲಭ್ಯಗಳ ಕೊರತೆ ಉಂಟಾಗದಂತೆ ನೋಡಿಕೊಳ್ಳುವುದು ಮತ್ತು ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಕಾಪಾಡುವುದು ಅಗತ್ಯವಾಗಿದೆ.

ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಪೂರಕವಾದ ವಾತಾವರಣ ನಿರ್ಮಿಸುವುದು, ಅವರ ಸಮಸ್ಯೆಗಳಿಗೆ ಸ್ಪಂದಿಸುವುದು ಹಾಗೂ ಮೂಲಭೂತ ಸೌಲಭ್ಯಗಳನ್ನು ಸಮರ್ಪಕವಾಗಿ ಒದಗಿಸುವುದು ಆಡಳಿತದ ಆದ್ಯತೆಯಾಗಬೇಕು. ಈ ನಿಟ್ಟಿನಲ್ಲಿ ಇಲಾಖೆ ನಿರಂತರ ಮೇಲ್ವಿಚಾರಣೆ ನಡೆಸಿ, ವಸತಿ ನಿಲಯಗಳ ಕಾರ್ಯನಿರ್ವಹಣೆಯಲ್ಲಿ ಸುಧಾರಣೆ ತರಬೇಕು ಎಂದು ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಮಿತಿ ಆಗ್ರಹಿಸಿದೆ.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಕೃಷ್ಣ ಶಾವಂತಗೇರ ಅವರು ಮನವಿಯನ್ನು ಸ್ವೀಕರಿಸಿ, ಜಿಲ್ಲೆಯ ವಸತಿ ನಿಲಯಗಳಲ್ಲಿನ ಸಮಸ್ಯೆಗಳ ಕುರಿತು ಪರಿಶೀಲನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂಬುದು ಪರಿಷತ್‌ನ ಪ್ರಮುಖ ಬೇಡಿಕೆಯಾಗಿದೆ. ವಸತಿ ನಿಲಯಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಕೇಂದ್ರಗಳಾಗಬೇಕು; ಸಮಸ್ಯೆಗಳಿಂದ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯಾಗಬಾರದು. ವಿದ್ಯಾರ್ಥಿಗಳಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ, ಅವರ ಹಕ್ಕುಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾ–ರಿಯಿಂದ ಕಾರ್ಯನಿರ್ವಹಿಸಬೇಕು ಎಂದು ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಮಿತಿ ಒತ್ತಾಯಿಸಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101